ಯುವ ಸ್ಪೂರ್ತಿ



"ಈ ಜಗತ್ತಿನಲ್ಲಿರುವ ಎಲ್ಲಾ ವ್ಯತ್ಯಾಸಗಳು ಪದವಿಯಿಂದ ಕೂಡಿರುತ್ತವೆ, ದಯೆಯಿಂದಲ್ಲ, ಏಕೆಂದರೆ ಏಕತೆಯೇ ಎಲ್ಲದರ ರಹಸ್ಯ."

–ಸ್ವಾಮಿ ವಿವೇಕಾನಂದ

MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER – VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ : 197 | ಬುಧವಾರ : 21-05-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 197 | WEDNESDAY: 21-05-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಆರನೇ ಗ್ಯಾರಂಟಿ ಜಾರಿ



**ಹೊಸಪೇಟೆ, ಮೇ 21–** ರಾಜ್ಯದಲ್ಲಿ ಪಂಚಗ್ಯಾರಂಟಿಯನ್ನು ಜಾರಿ ಮಾಡಿರುವ ಕಾಂಗ್ರೆಸ್ ಸರ್ಕಾರ 6ನೇ ಗ್ಯಾರಂಟಿಯಾಗಿ ಭೂ ಮಾಲೀಕತ್ವ ನೀಡುವ ಭೂ ಗ್ಯಾರಂಟಿಯನ್ನು ಜಾರಿ ಮಾಡಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಹೇಳಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ 2 ವರ್ಷ ಪೂರೈಸಿರುವ ಸಂಭ್ರಮವಾಗಿ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸಮರ್ಪಣಾ ಸಂಕಲ್ಪ ಸಮಾವೇಶದಲ್ಲಿ 1 ಲಕ್ಷಕ್ಕೂ ಹೆಚ್ಚು ಜನರಿಗೆ ಹಕ್ಕು ಪತ್ರಗಳನ್ನು ವಿತರಿಸಿ ಮಾತನಾಡಿದ

2ನೇ ಪುಟಕ್ಕೆ

# ಹೊಸಪೇಟೆಯಲ್ಲಿ ಕಾಂಗ್ರೆಸ್, ಶಕ್ತಿಪ್ರದರ್ಶನ

**ಹೊಸಪೇಟೆ,ಮೇ 21–** ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬಿದ ಬೆನ್ನಲ್ಲಿ ಹೊಸಪೇಟೆಯಲ್ಲಿ ಆಯೋಜಿಸಲಾಗಿದ್ದ ಸಮರ್ಪಣೆ ಸಂಕಲ್ಪ ಸಮಾವೇಶ ಶಕ್ತಿ ಹಾಗೂ ಒಗ್ಗಟ್ಟಿನ ಪ್ರದರ್ಶನದ ವೇದಿಕೆಯಾಗಿತ್ತು.

ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಎಚ್.ಕೆ.ಪಾಟೀಲ್, ಚಲುವರಾಯಸ್ವಾಮಿ, ಡಾ.ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ಜಮೀರ್ ಅಹಮದ್‌ಖಾನ್, ಈಶ್ವರ್‌ಖಂಡ್ರೆ, ಲಕ್ಷ್ಮಿ?ಹೆಬ್ಬಾಳ್ಕರ್, ಸತೀಶ್ ಜಾರಕಿಹೊಳಿ, ಕೃಷ್ಣಭೈರೇಗೌಡ, ದಿನೇಶ್‌ಗುಂಡೂರಾವ್, ಎಂ.ಬಿ.ಪಾಟೀಲ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಹಲವಾರು ಮಂದಿ ಭಾಗವಹಿಸಿದ್ದರು. ಬಿರು ಮಳೆಯ ನಡುವೆಯೂ ಛತ್ರಿ ಹಿಡಿದುಕೊಂಡು ಗಣ್ಯರು ಕಾರ್ಯಕ್ರಮಕ್ಕೆ ಆಗಮಿಸಿದರು. ಬೃಹತ್ ಪ್ರಮಾಣದ ಜಪಾನ್ ಟೆಂಟ್ ಅನ್ನು ನಿರ್ಮಿಸಲಾಗಿತ್ತು. ಲಕ್ಷಾಂತರ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶದಲ್ಲಿ ಭಾಗವಹಿಸಿದ್ದ ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ ವೇದಿಕೆಯ ಕೇಂದ್ರಬಿಂದುವಾಗಿದ್ದರು.ಸುಮಾರು ಒಂದೂವರೆ ಗಂಟೆ ತಡವಾಗಿ ಗಣ್ಯರು ಕಾಯರ್ಕ್ರಮಕ್ಕೆ ಆಗಮಿಸಿದರು. ಅವರೊಂದಿಗೆ ಆಗಮಿಸಿದ ಡಿ.ಕೆ



.ಶಿವಕುಮಾರ್ ಸದಾ ತಮೊಂದಿಗೆ ಬಹುಮುಖ್ಯ ಕಡತಗಳನ್ನು ಹಿಡಿದುಕೊಂಡೇ ವೇದಿಕೆಯುದ್ದಕ್ಕೂ ಅಡ್ಡಾಡಿದ್ದು ಕಂಡುಬಂದಿತು. ರಾಹುಲ್‌ಗಾಂಧಿ ವೇದಿಕೆ ಹತ್ತುತ್ತಿದ್ದಂತೆ ಜಯಘೋಷಣೆಗಳು ಮೊಳಗಿದವು.

ರಾಹುಲ್‌ಗಾಂಧಿ ಎರಡು ಹೆಜ್ಜೆ ಮುಂದೆ ಬಂದು ನಂತರ ನಿಂತು ನಿಧಾನವಾಗಿ ಆಗಮಿಸುತ್ತಿದ್ದ ಮಲ್ಲಿಕಾರ್ಜುನ ಖರ್ಗೆಯವರನ್ನು ಜೊತೆಯಲ್ಲಿ ಕರೆದುಕೊಂಡು ಅವರ ಬೆನ್ನಿಗೆ ನಿಂತು ಮುಂದೆ ಸಾಗಿದರು. ವೇದಿಕೆಯಲ್ಲೂ ಖರ್ಗೆಯವರೊಂದಿಗೆ ಸುದೀರ್ಘ ಕಾಲ ಸಮಾಲೋಚನೆ ನಡೆಸಿದರು.

ರಾಹುಲ್‌ಗಾಂಧಿಯವರೊಂದಿಗೆ ಚರ್ಚಿಸಿದ ಬಳಿಕ ಖರ್ಗೆಯವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ತಮ ಬಳಿ ಕರೆದು ಕೆಲವು ಸೂಚನೆಗಳನ್ನು ನೀಡಿದರು.ರಹಸ್ಯವಾದ ಈ ಸಮಾಲೋಚನೆಯಲ್ಲಿ ರಾಹುಲ್‌ಗಾಂಧಿ ಕೂಡ ಮಧ್ಯಪ್ರವೇಶಿಸಿದರು. ಈ ನಡುವೆ ಸಿದ್ದರಾಮಯ್ಯ ಏನೋ ಹೇಳಲು ಪ್ರಯತ್ನಿಸಿದರು, ರಾಹುಲ್‌ಗಾಂಧಿ ಅತ್ತ ಹೆಚ್ಚು ಗಮನ ಕೊಡಲಿಲ್ಲ. 2ನೇ ಪುಟಕ್ಕೆ

## 'ಆಪರೇಷನ್ ಸಿಂಧೂರ' ಚುಟ್ ಪುಟ್ ಯುದ್ಧ : ಖರ್ಗೆ ವಿವಾದ



**ಹೊಸಪೇಟೆ,ಮೇ.21–** ಆಪರೇಷನ್ ಸಿಂಧೂರ ಬಗ್ಗೆ ಮತ್ತೆ ವ್ಯಂಗ್ಯ ಭರಿತ ಮಾತುಗಳನ್ನಾಡಿ ಕಾಂಗ್ರೆಸ್ ಹೊಸ ವಿವಾದವನ್ನು ಮೈ ಮೇಲೆ ಎಳೆದುಕೊಂಡಿದೆ. ಹೊಸಪೇಟೆಯಲ್ಲಿ ಇಂದು ರಾಜ್ಯ ಸರ್ಕಾರದ ಎರಡು ವರ್ಷದ ಸಾಧನೆ ಕುರಿತಂತೆ ನಡೆದ ಸಂಕಲ್ಪ ಸಮರ್ಪಣೆಯ ಸಮಾವೇಶದಲ್ಲಿ ಮಾತನಾಡಿದ ಎಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಾತಿನ ಬರದಲ್ಲಿ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯನ್ನು ಲಘುವಾಗಿ ಟೀಕಿಸಿದ್ದಾರೆ. ಪಾಕಿಸ್ತಾನದ ಮೇಲೆ ಚುಟ್ ಪುಟ್ ಕಾರ್ಯಾಚರಣೆ ಮಾಡಿದೆ ಎಂದು ಟೀಕಿಸುವ ಮೂಲಕ ಸೇನೆಯನ್ನು ಅಪಮಾನಿಸಲಾಗಿದೆ. 2ನೇ ಪುಟಕ್ಕೆ

## ಕಾರ್ಮಿಕ ಸಂಘಗಳ ಜಂಟಿ ಸಮಿತಿ ವತಿಯಿಂದ ಪ್ರಧಾನ ಮಂತ್ರಿಗಳಿಗೆ ಮನವಿ




ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.21–** ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಜೆ.ಸಿ.ಟಿ.ಯು ತಾ.ಘಟಕದ ವತಿಯಿಂದ ಪ್ರಧಾನ ಮಂತ್ರಿಗಳಿಗೆ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಸಿ.ಐ.ಟಿ.ಯು. ತಾ.ಅಧ್ಯಕ್ಷರಾದ ಹೆಚ್.ಶರ್ಫುದ್ದೀನ್ ಪೋತ್ನಾಳ್ ಮಾತನಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದಿಂದ ದುಡಿಯುವ ಜನರ ಹಕ್ಕುಗಳ ಕಸಿಯುತ್ತಿರುವ ಕಾರ್ಪೋರೇಟ್ ಕಂಪನಿಗಳಿಗೆ ನೆರವಾಗುವ ರೀತಿಯಲ್ಲಿ ತನ್ನ ನೀತಿಗಳನ್ನು ರೂಪಿಸುತ್ತಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಗಳು ಕೆಲಸದ ಪರಿಸ್ಥಿತಿ, ಕಾರ್ಮಿಕರ ದುಡಿಯುವ ಅವಧಿ, ಕನಿಷ್ಟ ವೇತನ ಸಾಮಾಜಿಕ ಭದ್ರತೆ, ಸಂಘಟನೆಯ ಹಕ್ಕು, ಸಾಮೂಹಿಕ ಚೌಕಸಿಯ ಹಕ್ಕು, ಹೋರಾಟದ ಹಕ್ಕು ಮತ್ತು ಮುಷ್ಕರಗಳ ಹಕ್ಕು,ಸೇರಿದಂತೆ ಕಾರ್ಮಿಕರ ಎಲ್ಲಾ ಮೂಲ ಭೂತ ಹಕ್ಕುಗಳಿಗೆ ಮಾರಕ ವಾಗಿವೆ, ಅದ್ದರಿಂದ ಕೂಡಲೇ ಕೇಂದ್ರ ಸರ್ಕಾರವು ಈ ಕಾರ್ಮಿಕ ವಿರೋಧಿ ಸಂಹಿತೆ ಗಳನ್ನು ರದ್ದು ಪಡಿಸಬೇ ಕು.ಇಲ್ಲದೆ ಇದ್ದಲ್ಲಿ ಜುಲೈ 9 ರಂದು ದೇಶಧ್ಯಾಂತ ಎಲ್ಲಾ ಕಾರ್ಮಿಕರಿಂದ ಸಾರ್ವತ್ರಿಕ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಪಟ್ಟಣದ ಬಸವ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ನೂರಾರು ಕಾರ್ಮಿಕರು ಪ್ರತಿಭಟನೆ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಿದರು.

ಎ.ಐ.ಯು.ಟಿ.ಯು.ಸಿ. ತಾ.ಅಧ್ಯಕ್ಷರಾದ ಚನ್ನಬಸವ ಜಾನೇಕಲ್ ಅಂಗನವಾಡಿ ಫೆಡರೇಶನ್ ತಾ.ಗೌರವಾಧ್ಯಕ್ಷರಾದ ಎಂ.ಬಿ.ಸಿದ್ದರಾಮಯ್ಯಸ್ವಾಮಿ , ವಸತಿ ನಿಲಯ ಕಾರ್ಮಿಕರ ತಾ.ಅಧ್ಯಕ್ಷರಾದ ನಾಗರಾಜ, ಸಿ.ಐ.ಟಿ.ಯು. ಕಾರ್ಯದರ್ಶಿ ಸಿದ್ದಲಿಂಗಯ್ಯ, ಕಟ್ಟಡ ಕಾರ್ಮಿಕರ ಸಂಘದ ತಾ.ಅಧ್ಯಕ್ಷರಾದ ರುದ್ರಪ್ಪ ನಾಯಕ್, ರಾಮಣ್ಣ ಮಾಡಬಾಯಿ, ರಾಮಣ್ಣ, ಹನುಮಂತು, ಅಮರೇಶ,ಮಹಾಂತೇಶ,ಸಂಗೀತಾ, ಮುಸ್ತಾನ್ ಸೇರಿದಂತೆ ನೂರಾರು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದರು.


## ಮತ್ತೆ ಶುರುವಾಯ್ತಾ ಕೊರೋನಾ ಕೇಡುಗಾಲ..? ಸರ್ಕಾರ ಅಲರ್ಟ್

**ನವದೆಹಲಿ,ಮೇ21–** ಮೂರು ವರ್ಷಗಳ ಹಿಂದೆ ಭಾರತ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳನ್ನು ಬೆಚ್ಚಿ ಬೀಳಿಸಿದ್ದ ಮಹಾಮಾರಿ ಕೋವಿಡ್ 19 ಮತ್ತೊಮ್ಮೆ ತಲೆ ಎತ್ತಿದೆ.

ಮುಂಬೈನ ಕಿಂಗ್ ಎಡ್ವರ್ಡ್ ಮೆಮೊರಿಯಲ್ (ಎಇಒ) ಆಸ್ಪತ್ರೆಯಲ್ಲಿ ಕೆಲವು ದಿನಗಳ ಹಿಂದೆ ಎರಡು ಕೋವಿಡ್ ಸಂಬಂಧಿತ ಸಾವು ಪ್ರಕರಣಗಳು ವರದಿಯಾಗಿದೆ. ಕೊರೋನಾದಿಂದಾಗಿ ಇಬ್ಬರು ವ್ಯಕ್ತಿಗಳು ಮೃತಪಟ್ಟಿದ್ದಾರೆ. ಮುಂಬೈನಲ್ಲಿ ಎಚ್ಚರಿಕೆ ತೆಗೆದುಕೊಳ್ಳಲು ಸೂಚನೆ ನೀಡಲಾಗಿದ್ದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ. ಮೃತರಲ್ಲಿ ಒಬ್ಬ 14 ವರ್ಷದ ಬಾಲಕನಾಗಿದ್ದು, ನೆಫ್ರೋಟಿಕ್ ಸಿಂಡೋಮ್‌ನಿಂದ ಉಂಟಾದ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಎಂದು ತಿಳಿದುಬಂದಿದೆ. ಮತ್ತೊಬ್ಬ ವ್ಯಕ್ತಿ 54 ವರ್ಷದ ಕ್ಯಾನ್ಸರ್ ರೋಗಿಯಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದರು. ಈ ಇಬ್ಬರ ಸಾವಿಗೂ ಕೋವಿಡ್ ಮಾತ್ರ ಕಾರಣವಾಗಿಲ್ಲ. ಇತರ ಆರೋಗ್ಯ ಸಮಸ್ಯೆಗಳ ಜೊತೆಗೆ ಸಂಬಂಧಿಸಿದ್ದಾಗಿವೆ ಎಂದು ತಜ್ಞರು ಸ್ಪಷ್ಟಪಡಿಸಿದ್ದಾರೆ.

ಕೊರೋನಾ ಹೆಚ್ಚಳದ ಕುರಿತು ಬ್ರಿಹನ್ ಮುಂಬೈ ಮಹಾನಗರ ಪಾಲಿಕೆ ಸಾರ್ವಜನಿಕರಲ್ಲಿ ಆತಂಕದ ಅವಶ್ಯಕತೆ ಇಲ್ಲ ಎಂದು ಹೇಳಿದೆ. ಈ ವರ್ಷದ ಮೇ ತಿಂಗಳಲ್ಲಿ ಕೋವಿಡ್ ಪ್ರಕರಣಗಳಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದೆ. ಖ್ಯಾತ ನಟಿ ಶಿಲ್ಪಾ ಶಿರೋಡ್ಕರ್ ಕೂಡ ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ.ಕೋವಿಡ್ –19 ಅಲೆಯು ಏಷ್ಯಾದ ದೇಶಗಳಾದ ಚೀನಾ, ಸಿಂಗಾಪುರ, ಹಾಂಗ್ ಕಾಂಗ್ ಮತ್ತು ಥೈಲ್ಯಾಂಡ್‌ಗೆ ಅಪ್ಪಳಿಸಿದೆ. ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವುದು ವಿಶ್ವಾದ್ಯಂತ ಆತಂಕ ಹೆಚ್ಚಿಸಿದೆ.

ಈಗಾಗಲೇ ಏಷ್ಯಾದ ದೇಶಗಳಾದ ಸಿಂಗಾಪುರ, ಹಾಂಗ್‌ಕಾಂಗ್ ಮತ್ತು ಥೈಲ್ಯಾಂಡ್‌ನಲ್ಲಿ ಅತಿ ಹೆಚ್ಚು ಪ್ರಕರಣಗಳು ಕಂಡುಬಂದಿವೆ. ಈ ಮಧ್ಯೆ, ಮುಂಬೈನ ಕೆಇಎಂ ಆಸ್ಪತ್ರೆಯಲ್ಲಿ ಇಬ್ಬರು ಕೋವಿಡ್ –ಪಾಸಿಟಿವ್ ರೋಗಿಗಳು ಸಾವನ್ನಪ್ಪಿದ್ದಾರೆ. ಕೋವಿಡ್ –19 ರೋಗಿಗಳಲ್ಲಿ ಈ ಹೆಚ್ಚಳಕ್ಕೆ ಪ್ರಮುಖ ಕಾರಣವೆಂದರೆ ವೇಗವಾಗಿ ಬೆಳೆಯುತ್ತಿರುವ ಓಮಿಕ್ರಾನ್‌ನ ಹೊಸ ರೂಪಾಂತರ, ಜೆಎನ್1 ಮತ್ತು ಎಲ್.ಎಫ್ 7 ರೂಪಾಂತರಗಳಿವೆ ಎಂದು ವರದಿಯಾಗಿದೆ. ಸಿಂಗಾಪುರದಲ್ಲಿ, ಈ ಸೋಂಕಿನಿಂದ ಸೋಂಕಿತ ರೋಗಿಗಳ ಸಂಖ್ಯೆ 2025 ರ ಮೇ ಆರಂಭದ ವೇಳೆಗೆ 14,000 ಕ್ಕಿಂತ



ಹೆಚ್ಚಾಗಿದೆ. ಏಪ್ರಿಲ್ ಕೊನೆಯ ವಾರದಲ್ಲಿ, ಈ ಸಂಖ್ಯೆ 11,100 ಆಗಿತ್ತು.

ಏಷ್ಯಾದ ದೇಶಗಳಲ್ಲಿ ಕೊರೊನಾದಿಂದ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ರೋಗಿಗಳ ಸಂಖ್ಯೆಯಲ್ಲಿ ಸ್ವಲ್ಪ ಇಳಿಕೆ ಕಂಡುಬಂದಿದೆ. ಪ್ರಸ್ತುತ ತಳಿಗಳು ಹಿಂದಿನವುಗಳಿಗಿಂತ ಹೆಚ್ಚು ಸಾಂಕ್ರಾಮಿಕ ಅಥವಾ ತೀವ್ರವಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಈ ಹೆಚ್ಚಳಕ್ಕೆ ಕಾರಣ ಜನರ ರೋಗನಿರೋಧಕ ಶಕ್ತಿ ಕಡಿಮೆಯಾಗಿರಬಹುದು. ಪ್ರಸ್ತುತ ಪ್ರಮುಖ ರೂಪಾಂತರಗಳು ಎಲ್ ಎಫ್ 7 ಮತ್ತು ಎನ್‌ಬಿ1.8 ಆಗಿದ್ದು, ಇವು ಜೆಎನ್ 1ರ ಉಪವಿಭಾಗಗಳಾಗಿವೆ.

**ಜೆನ್ 1 ತಳಿ ಎಂದರೇನು?:** ಜೆಎನ್1 ಆಗಸ್ಟ್ 2023ರಲ್ಲಿ ಗುರುತಿಸಲಾದ ಓಮಿಕ್ರಾನ್ ಬಿ 2.86ರ ವಂಶಸ್ಥರು, ಡಿಸೆಂಬರ್ 2023ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಇದನ್ನು ಆಸಕ್ತಿಯ ರೂಪಾಂತರ ಎಂದು ವರ್ಗೀಕರಿಸಿತ್ತು. ಈ ತಳಿಯು ಸುಮಾರು 30 ರೂಪಾಂತರಗಳನ್ನು ಹೊಂದಿದ್ದು, ಅವು ರೋಗನಿರೋಧಕ ವ್ಯವಸ್ಥೆಯನ್ನು ತಪ್ಪಿಸಲು ವಿಕಸನಗೊಂಡಿವೆ. ಆ ಸಮಯದಲ್ಲಿ ಯಾವುದೇ ಇತರ ತಳಿಗಳಿಗಿಂತ ಹೆಚ್ಚು, ಅದಾಗ್ಯೂ, 2023 ರ ಅಂತ್ಯದ ವೇಳೆಗೆ ಬಿ.ಎ.2.86 ಸಾರಸ್ ಕೋವಿಡ್ ಜೆಎನ್ 2 ನ ಪ್ರಬಲ ತಳಿಯಾಗಿ ಹೊರಹೊಮ್ಮಲಿಲ್ಲ. ಬಿಎ 2.86ರ ವಂಶಸ್ಥರಾದ ಜೆಎನ್ ಈಗ ಒಂದು ಅಥವಾ ಎರಡು ಹೆಚ್ಚುವರಿ ರೂಪಾಂತ ಆದರೂ, ಅದು ತನ್ನ ಪೂರ್ವಜರಂತೆಯೇ ರೋಗನಿರೋಧಕ ಶಕ್ತಿಯನ್ನು ತಪ್ಪಿಸಿಕೊಳ್ಳುವ ಲಕ್ಷಣ ಉಳಿಸಿಕೊಂಡಿದೆ.

2ನೇ ಪುಟಕ್ಕೆ

## ಜೆಸ್ಕಾಂ ವಿದ್ಯುತ್ ಗ್ರಾಹಕರ ದೂರುಗಳ ಕುಂದು ಕೊರತೆ ಸಭೆಯಲ್ಲಿ ಗ್ರಾಹಕರಿಂದ 10 ಅರ್ಜಿಗಳ ಸಲ್ಲಿಕೆ.

ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.21–** ಪಟ್ಟಣದ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕಛೇರಿಯಲ್ಲಿ ನಡೆದ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ ಜೆಸ್ಕಾಂ ವ್ಯಾಪ್ತಿಯಲ್ಲಿನ ಗ್ರಾಮೀಣ ಭಾಗದಲ್ಲಿನ ಗ್ರಾಮಗಳು ಸೇರಿದಂತೆ ಮಾನ್ವಿ ಪಟ್ಟಣಗಳ ವಿದ್ಯುತ್ ಗ್ರಾಹಕರ ದೂರುಗಳ ಕುಂದು ಕೊರತೆ ಸಭೆಯಲ್ಲಿ ರಾಯಚೂರು ಗು.ವಿ.ಸ.ಕಂ.ನಿ.ಕಾರ್ಯ ಪಾಲನ ವೃತ್ತ ಕಛೇರಿ ಅಧಿಕ್ಷಕ ಅಭಿಯಂತರರಾದ ವೆಂಕಟೇಶ ಮಾತನಾಡಿ ಮಳೆಗಾಲ ಇರುವುದರಿಂದ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪರಿವರ್ತಗಳು ಕೆಟ್ಟು ಹೋಗುವ ಸಂಭವ ಜಾಸ್ತಿ ಇರುವುದರಿಂದ ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗ್ರಾಹಕರ ದೂರುಗಳಿಗೆ ಶೀಘ್ರವೇ ಸ್ಪಂದಿಸುವಂತೆ ತಿಳಿಸಿದರು. ತಾಲೂಕಿನ ವಿವಿಧ ಗ್ರಾಮಗಳ ಜನರು ಟ್ರಾನ್ಸ ಪಾರ್ಮರ್ ದುರಸ್ಥಿ ಮಾಡಿಕೊಡುವಂತೆ ಸಭೆಯಲ್ಲಿ ಮನವಿ ಸಲ್ಲಿಸಿದರು. ಕುಂದು ಕೋರತೆ ಸಭೆಯಲ್ಲಿ ಟ್ರಾನ್ಸ ಪಾರ್ಮರ್ ದುರಸ್ಥಿಗಾಗಿ 10 ಅರ್ಜಿಗಳು ಸಲ್ಲಿಕೆಯಾದವು. ಎ.ಇ.ಚಂದ್ರಶೇಖರ ದೇಸಾಯಿ, ಮಾನ್ವಿ ಜೆಸ್ಕಾಂ, ಎ.ಇ.ಇ. ವೈದ್ಯಾನಾಥ ಹಾಗೂ ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ,ಜೆಸ್ಕಾಂ ಗುತ್ತಿಗೆದಾರರು , ಗ್ರಾಹಕರು ಇದ್ದರು.



## ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಅತಿಥಿ ಶಿಕ್ಷಕರನ್ನು ನೇಮಕ ಮಾಡಿ : ರಂಗಪ್ಪ ನಾಯಕ

ಯುವ ಮಾರ್ಗ ಸುದ್ದಿ

**ದೇವದುರ್ಗ,ಮೇ.21–**'ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಖಾಲಿ ಶಿಕ್ಷಕರ ಹುದ್ದೆಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡುವ ಮೂಲಕ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲ ಮಾಡಿಕೊ ಡಬೇಕು' ಎಂದು ಅತಿಥಿ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ರಂಗಪ್ಪ ನಾಯಕ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯ– ರಂಗಪ್ಪ ಲ್ಲಿ ಮಾತನಾಡಿದ ಅವರು, 'ತಾಲ್ಲೂಕಿನಾದ್ಯಂತ ಶಿಕ್ಷಕರ ಕೊರತೆ ಇದೆ. ಗ್ರಾಮೀಣ ಪ್ರದೇಶದ ಮಕ್ಕಳು ಪಟ್ಟಣದ ಖಾಸಗಿ ಶಾಲೆಗಳಿಗೆ ವರ್ಗಾವಣೆ ಪಡೆಯುತ್ತಿದ್ದಾರೆ. ಸರ್ಕಾರಿ ಶಾಲೆಗಳ ದಾಖಲಾತಿ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಸರ್ಕಾರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು. ಶಿಕ್ಷಕರಿಲ್ಲದ ತಾಲ್ಲೂಕಿನ ಎಲ್ಲಾ ಶಾಲೆಗಳಿಗೆ ಎರವಲು ಸೇವೆ ಬದಲಿಗೆ ಕಾಯಂ ಶಿಕ್ಷಕರನ್ನು ನೇಮಕ ಮಾಡಬೇಕು' ಹಾಗೂ ಅತಿಥಿ ಶಿಕ್ಷಕರ ನೇಮಕಾತಿ ನಿಯಮಗಳಾದ



ಮೇರಿಟ್ ಪದ್ಧತಿಯನ್ನು ಕೈಬಿಟ್ಟು ಮೊದಲು ಮಾಡಿದವರಿಗೆ ಮೊದಲ ಆದ್ಯತೆ ನೀಡಬೇಕು. 12000 ಗೌರವಧನ ಸಾಕಾಗುವುದಿಲ್ಲ ಕನಿಷ್ಠ 25000 ಗೌರವಧನ ನೀಡಬೇಕು ಎಂದು ಆಗ್ರಹಿಸಿದರು.

## ಮೊದಲನೇಯ ಪುಟದಿಂದ

# ಹೊಸಪೇಟೆಯಲ್ಲಿ ಕಾಂಗ್ರೆಸ್, ಶಕ್ತಿಪ್ರದರ್ಶನ

ರಾಷ್ಟ್ರರಾಜಕಾರಣ ಕುರಿತಂತೆ ರಾಹುಲ್‌ಗಾಂಧಿ, ಖರ್ಗೆ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ವೇದಿಕೆಯಲ್ಲೆ ಸುದೀರ್ಘ ಸಮಾಲೋಚನೆ ನಡೆಸಿದರು.ಮೂವರ ಪ್ರಮುಖ ಮಾತುಕತೆಯನ್ನು ಮೂಕಪ್ರೆ?ಕ್ಷಕನಂತೆ ಆಲಿಸುತ್ತಿದ್ದ ಡಿ.ಕೆ.ಶಿವಕುಮಾರ್ ಸ್ವಲ್ಪ ಹೊತ್ತಿನ ಬಳಿಕ ಅಲ್ಲಿಂದ ಎದ್ದು ಬೇರೆ ಕಡೆ ಸ್ಥಳಾಂತರಗೊಂಡರು. ರಣದೀಪ್ ಸಿಂಗ್ ಸುರ್ಜೇವಾಲರವರು ಡಿ.ಕೆ.ಶಿವಕುಮಾರ್ ಕುರ್ಚಿಯಲ್ಲಿ ಕುಳಿತು ಚರ್ಚೆಯಲ್ಲಿ ತೊಡಗಿಸಿಕೊಂಡರು.

ಸುಮಾರು ಹತ್ತು ನಿಮಿಷ ಕಾಲ ಗಂಭೀರ ಚರ್ಚೆ ಮುಂದುವರೆದಿತ್ತು. ರಾಹುಲ್‌ಗಾಂಧಿ ಕಾಗದಪತ್ರಗಳನ್ನು ಹಿಡಿದುಕೊಂಡು ವಿವರಣೆ ನೀಡುತ್ತಿದ್ದುದು ಕಂಡುಬಂದಿತು. ಒಂದು ಹಂತದಲ್ಲಿ ಡಿ.ಕೆ.ಶಿವಕುಮಾರ್‌ರವರು ಹೈಕಮಾಂಡ್ ನಾಯಕರ ಸಮೀಪ ನಿಂತು ಚರ್ಚೆಯನ್ನು ಕೇಳಿಸಿಕೊಳ್ಳುತ್ತಿದ್ದುದು ಕುತೂಹಲ ಕೆರಳಿಸಿತು.ಹೈಕಮಾಂಡ್ ನಾಯಕರ ಸಮಾಲೋಚನೆ ನಡುವೆ ಸಿದ್ದರಾಮಯ್ಯ ತಮಗೂ ಅದಕ್ಕೂ ಸಂಬಂಧ ಇಲ್ಲ ಎಂಬಂತೆ ಕುಳಿತಿದ್ದರು. ಈ ನಡುವೆ ಕಂದಾಯ ಸಚಿವ ಕೃಷ್ಣಭೈರೇಗೌಡ ತಮ ಇಲಾಖೆಯ ಸಾಧನೆ ಕುರಿತು ಸುದೀರ್ಘ ವಿವರಣೆ ನೀಡುತ್ತಿದ್ದರು.ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ರವರು ಸಿದ್ದರಾಮಯ್ಯನವರ ಸೂಚನೆ ಮೇರೆಗೆ ಮಲ್ಲಿಕಾರ್ಜುನ ಖರ್ಗೆಯವರ ಬಳಿ ಬಂದು ಕೆಲ ಸೂಚನೆಗಳನ್ನು ಪಡೆದುಕೊಂಡರು.ಸಿದ್ದರಾಮಯ್ಯ, ಸಚಿವ ಜಮೀರ್ ಅಹಮದ್ ಖಾನ್, ಶಾಸಕ ನ.ಭರತರೆಡ್ಡಿ ಸೇರಿದಂತೆ ಹಲವು ಸ್ಥಳೀಯ ಮುಖಂಡರ ಜೊತೆ ಚರ್ಚೆ ನಡೆಸಿದರು.

ಇತ್ತ ಬಳ್ಳಾರಿ ಮತ್ತು ಹೊಸಪೇಟೆ ಜಿಲ್ಲೆಯ ಹಿರಿಯ ಶಾಸಕರು ಕೂರಲು ಕುರ್ಚಿ ಇಲ್ಲದೆ ನಿಂತುಕೊಂಡೇ ಕಾರ್ಯಕ್ರಮದ ಉಸ್ತುವಾರಿಯನ್ನು ನಿರ್ವಹಿಸಿದರು.ವೇದಿಕೆಯಲ್ಲಿ ಗಣ್ಯರಿಗೆ ಕಾಫಿ, ತಿಂಡಿ ಸೇರಿದಂತೆ ಹಲವು ಉಪಚಾರಗಳು ಅಬಾಧಿತವಾಗಿ ನಡೆದವು. ಮಳೆಯಿಂದ ರಕ್ಷಣೆ ಪಡೆಯಲು ಬೃಹತ್ ಪ್ರಮಾಣದ ಜಪಾನ್ ಟೆಂಟ್ ಅಳವಡಿಸಲಾಗಿತ್ತು.ಗಣ್ಯರು ಸಿರಿಧಾನ್ಯಗಳನ್ನು ಮಡಿಕೆಗಳಿಗೆ ಸುರಿಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ರಾಹುಲ್‌ಗಾಂಧಿ ಕಾಂಗ್ರೆಸ್? ಸರ್ಕಾರದ ಸಾಧನೆಗಳ ಪುಸ್ತಕ ಲೋಕಾರ್ಪಣೆ ಮಾಡಿದರೆ, ಕಂದಾಯ ಇಲಾಖೆಯ ಸಾಧನೆ ಕುರಿತ ಪುಸ್ತಕವನ್ನು ಮಲ್ಲಿಕಾರ್ಜುನ ಖರ್ಗೆ ಬಿಡುಗಡೆ ಮಾಡಿದರು.ನಗರಾಭಿವೃದ್ಧಿ, ಕನ್ನಡ ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಾಧನೆಯ ಪುಸ್ತಕಗಳು ಬಿಡುಗಡೆಗೊಂಡವು. ಸಾಂಕೇತಿಕವಾಗಿ ಐದು ಜನರಿಗೆ ಹಕ್ಕುಪತ್ರ ಸೇರಿದಂತೆ ಸಮಗ್ರ ಕಂದಾಯ ದಾಖಲೆಗಳನ್ನು ವಿತರಿಸಲಾಯಿತು. ಇದೇ ವೇಳೆ ರಾಹುಲ್‌ಗಾಂಧಿಯವರು ಇಂದಿರಾಗಾಂಧಿಯವರ ಪ್ರತಿಮೆಯನ್ನು ಅನಾವರಣ ಮಾಡಿದರು.

# 'ಆಪರೇಷನ್ ಸಿಂಧೂರ'ಖರ್ಗೆ ವಿವಾದ

ಮಲ್ಲಿಕಾರ್ಜುನ ಖರ್ಗೆ ಅವರ ಈ ಮಾತುಗಳು ಸಾಮಾಜಿಕ ತಾಲತಾಣದಲ್ಲಿ ವ್ಯಾಪಕ ಟೀಕೆಗೆ ಒಳಗಾಗಿದೆ. ಹಿರಿವೈಸ್ ನಲ್ಲಿ ಅವರ ಅರಳು ಮರಳು ಎಂಬಂತೆ ಮಾತನಾಡುತ್ತಿದ್ದಾರೆ ಎಂದು ನೆಟ್ಟಿಗರು ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ಹಿರಿಯ ನಾಯಕ ವಿಧಾನ ಪರಿಷತ್ ಸದಸ್ಯ ಪಿ ರವಿಕುಮಾರ್ ಮಾತನಾಡಿ ಖರ್ಗೆ ಅವರು ಈ ರೀತಿ ಮಾತುಗಳು ತೀವ್ರ ಆಕ್ಷೇಪಾರ್ಹ. ಈಗಾಗಲೇ ಪಾಕಿಸ್ತಾನದವರೇ ಕರ್ಚರಣೆಯನ್ನು ಒಪ್ಪಿಕೊಂಡಿರುವಾಗ ಪ್ರತಿಪಕ್ಷವಾಗಿ ಕಾಂಗ್ರೆಸ್ ನವರು ಈ ರೀತಿ ಮಾತುಗಳ ನಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ವಾಗ್ದಾಳಿ ನಡೆಸಿದ್ದಾರೆ. ದೇಶದ ರಕ್ಷಣೆ ವಿಚಾರ ಬಂದಾಗ ಪಕ್ಷಬೇಧ ಮರೆದೆ ಸೇನೆ ಮತ್ತು ಕೇದ್ರ ಸರಕಾರದ ಜೊತೆ ನಿಲ್ಲಬೇಕಾಗಿದ್ದ ಕಾಂಗ್ರೆಸ್ ಸೇನೆಯನ್ನೇ ಬಳಸಿಕೊಂಡು ರಾಜಕೀಯ ಮಾಡುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

# ಆರನೇ ಗ್ಯಾರಂಟಿ ಜಾರಿ

ಅವರು, ಚುನಾವಣಾ ಪೂರ್ವದಲ್ಲಿ ಪಂಚಗ್ಯಾರಂಟಿಯ ಆಶ್ವಾಸನೆ ನೀಡಿ, ಅದನ್ನು ಈಡೇರಿಸಿ ನುಡಿದಂತೆ ನಡೆದಿದ್ದೇವು. ಈಗ ಭೂ ಮಾಲೀಕತ್ವದ 6ನೇ ಗ್ಯಾರಂಟಿಯನ್ನು ಜಾರಿ ಮಾಡಿದ್ದೇವೆ ಎಂದರು.

ರಾಜ್ಯದಲ್ಲಿ ಲಕ್ಷಾಂತರ ಜನ ಭೂಮಿಯ ಅನುಭವದಲ್ಲಿದ್ದರೂ ಅವುಗಳ ಮಾಲೀಕತ್ವದ ಹಕ್ಕು ಹೊಂದಿರಲಿಲ್ಲ. ಇದನ್ನು ಗಮನಿಸಿ ನಾನು ಇಂತಹವರಿಗೆ ಹಕ್ಕುಪತ್ರ ನೀಡುವಂತೆ ಸೂಚಿಸಿದ್ದೆ. ಅದರಂತೆ ಇಂದು 1 ಲಕ್ಷಕ್ಕೂ ಹೆಚ್ಚು ಜನರಿಗೆ ಭೂ ಮಾಲೀಕತ್ವದ ಹಕ್ಕು ಪತ್ರಗಳನ್ನು ನೀಡಿ 2 ಸಾವಿರ ಹಟ್ಟಿ ಮತ್ತು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಿದ್ದೇವೆ ಎಂದರು.ಮುಂದಿನ ದಿನಗಳಲ್ಲಿ ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಯಾರೂ ಕೂಡಾ ಜಮೀನಿನ ಮಾಲೀಕತ್ವ ಇರದಂತಹ ರಾಜ್ಯವಾಗಿ ಇರಲಿದೆ. ಪ್ರತಿಯೊಬ್ಬರಿಗೂ ಅವರ ಅನುಭವದ ಭೂ ಮಾಲೀಕತ್ವ ಸಿಗಬೇಕು ಎಂದರು.

ರಾಜ್ಯದಲ್ಲಿ ಇನ್ನೂ 500 ಕಂದಾಯ ಗ್ರಾಮಗಳನ್ನು ಘೋಷಿಸಬೇಕಿದೆ. ಹಾಗೆಯೇ 50 ಸಾವಿರ ಮಂದಿಗೆ ಭೂ ಹಕ್ಕುಪತ್ರಗಳನ್ನು ನೀಡಬೇಕಿದೆ. ಇದನ್ನು ಬರುವ ಆರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ನಾನು ಸರ್ಕಾರಕ್ಕೆ ತಿಳಿಸಿದ್ದೇನೆ ಎಂದು ರಾಹುಲ್‌ಗಾಂಧಿ ಹೇಳಿದರು.ರಾಜ್ಯದಲ್ಲಿ ಯಾರೊಬ್ಬರೂ ಜಮೀನಿನ ಹಕ್ಕು ಪತ್ರ ಇಲ್ಲದೆ ಇರಬಾರದು ಇದು ನಮ್ಮ ಉದ್ದೇಶ, ಮಾಜಿ ಪ್ರಧಾನಿ ದಿ. ಇಂದಿರಾಗಾಂಧಿ ಅವರ ಆಶಯದಂತೆ ಕಾಂಗ್ರೆಸ್ ಸರ್ಕಾರ ಭೂ ಗ್ಯಾರಂಟಿಯನ್ನು 6ನೇ ಗ್ಯಾರಂಟಿಯಾಗಿ ಜಾರಿ ಮಾಡಿದೆ. ಈ ಗ್ಯಾರಂಟಿ ಜನಪರ ಹಾಗೂ ಬಡವರ ಪರವಾದದ್ದು ಎಂದರು.

ಚುನಾವಣಾ ಪೂರ್ವದಲ್ಲಿ ನಾವು ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿದಾಗ ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿಯ ನಾಯಕರುಗಳೆಲ್ಲಾ ಈ ಗ್ಯಾರಂಟಿಗಳನ್ನು ಜಾರಿ ಮಾಡಲು ಆಗಲ್ಲ ಎಂದೆಲ್ಲಾ ಹೇಳಿದ್ದರು. ಆದರೆ, ನಾವು ಚುನಾವಣಾ ಸಂದರ್ಭದಲ್ಲಿ ಕೊಟ್ಟ ಮಾತಿನಂತೆ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿ ಮಾಡಿದ್ದೇವೆ. ಲಕ್ಷಾಂತರ ಕುಟುಂಬಗಳ ಖಾತೆಗಳಿಗೆ ಹಣ ಜಮಾ ಮಾಡಿ ನುಡಿದಂತೆ ನಡೆದಿದ್ದೇವೆ ಎಂದರು.ಬಿಜೆಪಿಯ ಉದ್ದೇಶ ಹಣ ಮತ್ತು ಸಂಪತ್ತು ಕೆಲ ಆಯ್ದ ವ್ಯಕ್ತಿಗಳಿಗೆ ಮಾತ್ರ ಸೇರಬೇಕು ಎಂಬುದು. ಆದರೆ ಕಾಂಗ್ರೆಸ್ ಉದ್ದೇಶ ಹಣ ಮತ್ತು ಸಂಪತ್ತು ಬಡವರಿಗೆ ಸೇರಬೇಕು ಎಂಬುದು. ಹಾಗಾಗಿಯೇ ಐದು ಗ್ಯಾರಂಟಿಗಳನ್ನು ಜಾರಿ ಮಾಡಿ ಬಡವರ ಜೇಬಿಗೆ ಹಣ ಹಾಕಿದ್ದೇವೆ. ಇದರಿಂದ ಬಡವರ ಕಲ್ಯಾಣಕ್ಕೆ ನಾವು ಬದ್ಧ ಎಂಬುದನ್ನು ನಾವು ಸಾರಿದ್ದೇವೆ ಎಂದು ಹೇಳಿದರು

ಬಿಜೆಪಿಯ ನೀತಿಯಂತೆ ಆಯ್ದ ಕೆಲವರಿಗೆ ಹಣ ಸಿಕ್ಕರೆ ಅವರು ವಿದೇಶದಲ್ಲಿ ಆಸ್ತಿ ಮಾಡುತ್ತಾರೆ. ಆದರೆ ನಮ್ಮ ಸಂಕಲ್ಪ ಇರುವುದು ಬಡವರ ಕೈಯಲ್ಲಿ ದುಡ್ಡು ಇರಬೇಕು. ಇದರಿಂದ ದೇಶದ ಆರ್ಥಿಕತೆ ಬೆಳವಣಿಗೆಯಾಗುತ್ತದೆ ಎಂಬುದು ಅದರಂತೆ ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಕೈಯಲ್ಲಿ ಹಣ ಓಡಾಡುವಂತೆ ಮಾಡಿ ಅವರ ವಿದ್ಯಾಭ್ಯಾಸ, ಆರೋಗ್ಯ ಎಲ್ಲದಕ್ಕೂ ಈ ಹಣ ಬಳಕೆ ಮಾಡಲು ಅವಕಾಶ ಕಲ್ಪಿಸಿದ್ದೇವೆ ಎಂದು ರಾಹುಲ್‌ಗಾಂಧಿ ಹೇಳಿದರು. ಇದಕ್ಕೂ ಮೊದಲು ಸಮಾವೇಶವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಉದ್ಘಾ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಬಹುತೇಕ ಸಚಿವರು, ಶಾಸಕರು ಸಮಾವೇಶದಲ್ಲಿ ಉಪಸ್ಥಿತರಿದ್ದರು.

# ಮತ್ತೆ ಶುರುವಾಯ್ತಾ ಕೊರೋನಾ ಕೇಡುಗಾಲ..? ಸರ್ಕಾರ ಅಲರ್ಟ್

ಜಾನ್ಸ್ ಹಾಪ್ಕಿನ್ ವಿಶ್ವವಿದ್ಯಾಲಯವು ಜೆಎನ್ ಈಗ ಹೆಚ್ಚು ಪರಿಣಾಮಕಾರಿಯಾಗಿ ಹರಡಲು ವಿಕಸನಗೊಂಡಿದೆ ಎಂದು ಹೇಳುತ್ತದೆ. ಸಿಂಗಾಪುರದ ಒಳಚರಂಡಿಯಲ್ಲೂ ಕೋವಿಡ್ –19 ವೈರಸ್ ಕಂಡುಬಂದಿದೆ. ಆದಾಗ್ಯೂ ಈ ಹೊಸ ರೂಪಾಂತರವು ಹಿಂದಿನದಕ್ಕಿಂತ ವೇಗವಾಗಿ ಹರಡುತ್ತಿದೆಯೇ ಎಂಬುದು ಇನ್ನೂ ತಿಳಿದುಬಂದಿಲ್ಲ.ಪ್ರಸ್ತುತ ಕೋವಿಡ್ –19 ಲಸಿಕೆಗಳು ಜೆಎನ್. ತಳಿಯ ಮೇಲೆ ಕಾರ್ಯನಿರ್ವಹಿಸುತ್ತವೆಯೇ? ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ಜೆಎನ್.1 ರೂಪಾಂತರವನ್ನು ತಟಸ್ಥಗೊಳಿಸುವುದು ಕಷ್ಟ ಎಂದು ಹಲವಾರು ಅಧ್ಯಯನಗಳು ತೋರಿಸಿವೆ. ಜೀವಂತ ವೈರಸ್ಗಳು ಮತ್ತು ಪ್ರಯೋಗಾಲಯದಲ್ಲಿ ನಿರ್ಮಿತ ಹುಸಿ ವೈರಸ್ಗಳ ಮೇಲಿನ ಸಂಶೋಧನೆಯು ಲಸಿಕೆ ಅಥವಾ ಹಿಂದಿನ ಸೋಂಕಿನಿಂದ ಪಡೆದ ಪ್ರತಿಕಾಯಗಳು ಜೆಎನ್.1 ಅನ್ನು ಹಿಂದಿನ ತಳಿಗಳಿಗಿಂತ ಕಡಿಮೆ ಪರಿಣಾಮಕಾರಿಯಾಗಿ ನಿರ್ಬಂಧಿಸುತ್ತವೆ ಎಂದು ಕಂಡುಹಿಡಿದಿದೆ. ಇದರರ್ಥ ಜೆಎನ್.1 ದೇಹದ ಅಸ್ತಿತ್ವದಲ್ಲಿರುವ ಪ್ರತಿರಕ್ಷಣಾ ವ್ಯವಸ್ಥೆಯನ್ನು ಭಾಗಶಃ ತಪ್ಪಿಸಬಹುದು.ಜೆಎನ್ 1.5 ಮೊನೊವೆಲೆಂಟ್ ಬೂಸ್ಟರ್, ಇದು ಓಮಿಕ್ರಾನ್‌ನ ಎಕ್ಸ್ ಬಿಬಿ .1.5 ಉಪವಿಭಾಗವನ್ನು ಗುರಿಯಾಗಿಸಲು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ ಎಕ್ಸ್ ಬಿಬಿ –19 ಲಸಿಕೆಯಾಗಿದ್ದು, ಬಹು ಅಧ್ಯಯನಗಳಲ್ಲಿ ಜೆಎನ್ 1 ರೂಪಾಂತರದ ವಿರುದ್ಧ ರಕ್ಷಣೆ ಹೆಚ್ಚಿಸುವಲ್ಲಿ ಪರಿಣಾಮಕಾರಿ ಎಂದು ಕಂಡುಬಂದಿದೆ. ।

# ಬೆಲೆ ಏರಿಕೆಯನ್ನೇ ಸಾಧನೆ ಎಂದು ಸಮಾವೇಶ ಮಾಡುತ್ತಿದೆ ಕಾಂಗ್ರೆಸ್ : ಸಿ.ಟಿ.ರವಿ ವ್ಯಂಗ್ಯ

**ಚಿಕ್ಕಮಗಳೂರು, ಮೇ 21–** ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ, ಬೆಲೆ ಏರಿಕೆಯನ್ನು ಸಾಧನೆ ಎಂದು ಪರಿಗಣಿಸಿ ಸಮಾವೇಶ ಮಾಡಲು ಹೊರಟಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡು ವರ್ಷದಲ್ಲಿ ಅಗತ್ಯ ವಸ್ತುಗಳ ಬೆಲೆಯನ್ನು ಹೆಚ್ಚಿಸಿದೆ. ಜನನ ಪ್ರಮಾಣ ಪತ್ರ, ವಿದ್ಯುತ್ ಬಿಲ್ಲು, ಹಾಲು, ಸ್ಟಾಂಪ್ ಡ್ಯೂಟಿ, ಎಕ್ಸೈಸ್ ಡ್ಯೂಟಿ, ಸ್ಟಾಂಪ್, ಪೆಟ್ರೋಲ್, ಡೀಸೆಲ್, ಆಲ್ಕೋಹಾಲ್ ಸೇರಿದಂತೆ ಅನೇಕ ವಸ್ತುಗಳ ಬೆಲೆ ಏರಿಕೆ ಮಾಡಲಾಗಿದೆ. ಇದು ಕಾಂಗ್ರೆಸ್ ಹೇಳಿಕೊಳ್ಳಲಾಗದ ಸಾಧನೆ ಎಂದು ವ್ಯಂಗ್ಯವಾಡಿದರು.

ಪಂಚ ಗ್ಯಾರಂಟಿ ಪಂಕ್ಚರ್ ಆಗಿದೆ. ಗೃಹ ಲಕ್ಷ್ಮಿ ಪ್ರತಿ ತಿಂಗಳು ಬರುತ್ತಿಲ್ಲ. ಶಕ್ತಿ ಯೋಜನೆ ಬಂದ ಮೇಲೆ ರೂಟ್ಗಳಿಗೆ ಬಸ್ಸೇ ಇಲ್ಲ. ಶಾಲಾ ಮಕ್ಕಳು, ಪುರುಷರು ನಿತ್ಯ ಸಂಕಟ ಅನುಭವಿಸುತ್ತಿದ್ದಾರೆ. ಗುತ್ತಿಗೆ, ಸರ್ಕಾರಿ ನೌಕರರಿಗೆ 3 ರಿಂದ 5 ತಿಂಗಳಿನಿಂದ ವೇತನ ಇಲ್ಲ. ಕಿಸಾನ್ ಸಮ್ಮಾನ್ ಸದ್ದಿಲ್ಲದೆ ರದ್ದಾಗಿದೆ. ರೈತ ವಿದ್ಯಾನಿಧಿ, ಎಸ್ಸಿಪಿ, ಟಿಎಸ್ಪಿ 28 ಸಾವಿರ ಕೋಟಿ ಹಣ ದುರುಪಯೋಗವಾಗಿದೆ ಎಂದು ಅವರು ಗಂಭೀರ ಆರೋಪ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಆರ್.ದೇವರಾಜ ಶೆಟ್ಟಿ, ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಎಚ್ .ಡಿ.ಕಲ್ಮರುಡಪ್ಪ, ಜಿಲ್ಲಾ ವಕ್ತಾರ ಹಿರೇಮಗಳೂರು ಪುಟ್ಟಸ್ವಾಮಿ, ಗ್ರಾಮಾಂತರ ಅಧ್ಯಕ್ಷ ಈಶ್ವರಳ್ಳಿ ಮಹೇಶ್ ಇದ್ದರು.

# ಸಿಡಿಲು ಬಡಿದು ಬಾಲಕ ಸಾವು



**ಅರಕೇರಾ.ಮೇ,21–**ತಾಲೂಕಿನ ಭೋಗಿರಾಮನಗುಂಡ ಗ್ರಾಮದಲ್ಲಿ ಸಿಡಿಲು ಬಡಿದು ಕುರಿಗಾಹಿ ಬಾಲಕ ಮೃತಪಟ್ಟಿರುವ ಘಟನೆ ಸೋಮವಾರ ಸಂಜೆ ಜರುಗಿದೆ.

ಕುರಿಗಾಹಿ ಹನುಮಗೌಡ ಬಾಲಪ್ಪ ನಾಯಕ ಮುದಕಿ (16) ಮೃತ ಬಾಲಕ. ಗ್ರಾಮದ ಹೊರ ವಲಯದಲ್ಲಿ ಶಂಕರಬಂಡಿ ಹೊಲದಲ್ಲಿ ಕುರಿ ಮೇಯಿಸುತ್ತಿರುವ ಸಂದರ್ಭದಲ್ಲಿ ಮಳೆ,ಗಾಳಿ ಪ್ರಾರಂಭಗೊಂಡಿದೆ. ತಕ್ಷಣವೇ ಎಲ್ಲಾ ಕುರಿಗಳನ್ನು ಒಂದು ಕಡೆ ಕೂಡಿ ಹಾಕುತ್ತಿರುವ ಸಂದರ್ಭದಲ್ಲಿ ಸಿಡಿಲು ಬಡಿದೆ. ಜಾಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

# ಭಾರತದ ಉತ್ತರಕ್ಕೆ ವಿಶ್ವವೇ ಜಾಗೃತವಾಗಿದೆ

**ಬಾಗಲಕೋಟೆ,ಮೇ21:** ದೇಶದ ರಕ್ಷಣೆಗೆಗಾಗಿ ನಮ್ಮೆಲ್ಲರ ನಡೆ ಎಂಬ ಧ್ಯೇಯವಾಕ್ಯದೊಂದಿಗೆ ಬೃಹತ ತಿರಂಗಾ ಯಾತ್ರೆ ನಡೆಯಿತು.



ನಗರದ ಬಿ.ವಿ.ವಿ.ಸಂಘದ ಆವರಣದಲ್ಲಿರುವ ಶ್ರೀ ಬೀಳೂರ ಅಜ್ಜನ ದೇವಸ್ಥಾನದಿಂದ ಪ್ರಾರಂಭವಾದ ಬೃಹತ ತಿರಂಗಾ ಯಾತ್ರೆ ಪಶು ಆಸ್ಪತ್ರೆ, ಟೀಕಿನ ಮಠದ ರಸ್ತೆ, ಅಡತ ಬಜಾರ, ವಲ್ಲಬಾಯಿ ಚೌಕ,ಪೋಲೀಸ್ ಚೌಕ್ ಮುಖಾಂತರ ಮಹಾತ್ಮಾ ಗಾಂಧಿ ರಸ್ತೆ ಮೂಲಕ ಬಸವೇಶ್ವರ ವೃತ್ತದಲ್ಲಿ ಸಮಾವೇಶ ಗೊಂಡಿತು.ನಂತರ ಬಸವೇಶ್ವರ ವೃತ್ತದಲ್ಲಿ ಸಾರ್ವಜನಿಕರ ನ್ನುದ್ದೇಶಿಸಿ ಮಾತನಾಡಿದ ಸಂಸದ ಪಿ,ಸಿ,ಗದ್ದಿಗೌಡರ ಪಾಕಿಸ್ತಾನದಲ್ಲಿ ಉಗ್ರಗಾಮಿಗಳನ್ನು ತಯಾರು ಮಾಡುವ ನೆಲೆಗಳನ್ನು ಕೇವಲ 27 ಸೆಕೆಂಡಗಳಲ್ಲಿ ನಮ್ಮ ಯೋಧರು ಧ್ವಂಸಗೊಳಿದ್ದಾರೆ, ದೇಶದ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುರಾಲೋಚನೆ ಇದಕ್ಕೆ ಸೈನಿಕರು ತಕ್ಕ ಪಾಠ ಕಲಿಸಿದ್ದಾರೆ, ಹಾಗಾಗಿ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ನೀಡಿರುವ ತಕ್ಕ ಉತ್ತರವನ್ನು ಇಡಿ ವಿಶ್ವವೇ ನೋಡಿದೆ ಎಂದರು.

ಗುಳೆದಗುಡ್ಡದ ಒಪ್ಪತ್ತೇಶ್ವರಮಠದ ಪೂಜ್ಯಶ್ರೀ ಒಪ್ಪತ್ತೇಶ್ವರಸ್ವಾಮಿಗಳು ಮಾತನಾಡಿ ಭಾರತ ಶಾಂತಿಪ್ರೀಯ ದೇಶವಾದರು ನಮ್ಮನ್ನು ತುಳಿಯಲು ಬಂದವರನ್ನು ಸುಮ್ನೆ ಬಿಡುವ ದೇಶವಲ್ಲಾ ಎನ್ನುವ ಎಚ್ಚರಿಕೆಯನ್ನು ಈ ಆಪ್ರೇಶನ ಸಿಂಧೂರ ಮಾಡಿದೆ, ಗುಡಿಯೋಳಗಿನ ದೇವರಗಿಂತ ಗಡಿಯೋಳಗಿನ ದೇವರು ದೊಡ್ಡವ ಎನ್ನುವು ಹಾಗೆ ಗಡಿಯಲ್ಲಿನ ಸೈನಿಕರಿಂದಾಗಿ ನಾವೆಲ್ಲ ಇಂದು ಸುರಕ್ಷಿತವಾಗಿದ್ದೆವೆ, ಅಂಥ ಸೈನಿಕರಿಗೆ ಶಕ್ತಿ ತುಂಬುವ ಇಂಥಹ ತಿರಂಗಯಾತ್ರೆ ಮಾಡಿದ್ದು ಶ್ಲಾಘನೀಯ ಎಂದರು.

ತಿರಂಗಾ ಯಾತ್ರೆಯ ನೇತೃತ್ವದ ಸಾನಿದ್ಯ ವಹಿಸಿದ ಚರಂತಿಮಠದ ಶ್ರೀ ಪ್ರಭುಸ್ವಾಮಿಗಳು ಮಾತನಾಡಿ ಆಪರೇಶನ ಸಿಂಧೂರ ಇದು ಭಾರತ ಮಹಿಳೆಯರ ಗೌರವದ ಸಿಂಧೂರ, ಬಾರಿ ವ್ಯವಸ್ಥೆಯ ಮೂಲಕ ಜನರನ್ನು ಗುರಿಯಾಗಿಸದೆ ಉಗ್ರರರನ್ನು ಹಾಗೂ ಉಗ್ರರ ನೇಲೆಗಳ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿರುವುದನ್ನು ಇಡಿ ಜಗತ್ತೆ ಮೆಚ್ಚಿಕೊಂಡಿದೆ, ಆಪರೇಶನ ಸಿಂಧೂರದ ಮೂಲಕ ಜಗತ್ತಿಗೆ ಭಾರತದ ಶಕ್ತಿ ಸಾಮಥ್ಯ ಗೋತ್ತಾಗಿದೆ, ಜೋತಗೆ ಅನೇಕ ದೇಶಗಳಿಗೆ ನಡುಕ ಉಂಟುಮಾಡಿದೆ, ಜಗತ್ತಿನ ಬಹುತೆಕ ದೇಶಗಳು ಭಾರತದ ಬೆಂಬಲಕ್ಕೆ ನಿಂತಿವೆ, ಇಂದಿನ ಪ್ರಧಾನಿ ನರೇಂದ್ರ ಮೋದಿಯವರು ಬಹಳ ದೂರದೃಷ್ಟಿಯನ್ನು ಇಟ್ಟುಕೊಂಡ ಉತ್ತಮ ಹೆಜ್ಜೆಯನ್ನು ಇಡುತ್ತಿದ್ದಾರೆ, ಅಪರೇಶನ ಸಿಂಧೂರ ಇದು ಭಾರತೀಯರು ಹೆಮ್ಮೆ ಪಡುವಂತಹ ಕೆಲಸವಾಗಿದೆ, ಸೈನಿಕರಿಗೆ ಅತ್ಮಸ್ಥೈರ್ಯ ಶಕ್ತಿಯನ್ನು ತುಂಬುವ ಸಲುವಾಗಿ ಈ ತಿರಂಗಾ ಯಾತ್ರೆ ನೀಜಕ್ಕೂ ಆತ್ಮವಿಶ್ವಾಸವನ್ನು ತುಂಬಿದೆ, ಇಂದಿನ ಯುವಶಕ್ತಿಗೆ ದೇಶಭಕ್ತಿಯ ಅರಿವು ಸಲುವಾಗಿ ವಿದ್ಯಾರ್ಥಿ ದೇಸೆಯಲ್ಲಿ ಎನ,ಸಿ,ಸಿ ಯಲ್ಲಿ ಭಾಗವಹಿಸುವಂತ ಕಾರ್ಯಕ್ಕೆ ಮುಂದಾಗಬೇಕು ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿದರು. ಅಮೀನಗಡದ ಮಾತೆ ಮಾಣಿಕೇಶ್ವರಿ ಅಮ್ಮನವರು, ಮಾಜಿ ಶಾಸಕರಾದ ಡಾ. ವೀರಣ್ಣ ಚರಂತಿಮಠ, ನಂದು ಗಾಯಕವಾಡ, ಕ್ಯಾಪ್ಟನ್ ಕೋರಿ,ಸೇರಿದಂತೆ ವೀರ ಯೋಧರು, ನಿವೃತ್ತ ಯೋಧರು ಇದ್ದರು.

ಗಮನ ಸೇಳೆದ ತಿರಂಗಾ : ಬಾಗಲಕೋಟೆಯಲ್ಲಿ ಬಿಜೆಪಿ ತಿರಂಗಾ ಯಾತ್ರೆಯಲ್ಲಿ ಸುಮಾರು 300 ಅಡಿ ಉದ್ದದ ತಿರಂಗಾ ಧ್ವಜದ ಮನಮೋಹಕ ಯಾತ್ರೆ ಜನರ ಗಮನ ಸೇಳೆಯಿತು. ಬೀಳೂರ ಅಜ್ಜನ ದೇವಸ್ಥಾನದಲ್ಲಿ ಚರಂತಿಮಠದ ಪೂಜ್ಯಶ್ರೀ ಪ್ರಭುಸ್ವಾಮಿಗಳು,ಸಂಸರಾದ ಪಿ.ಸಿ.ಗದಿಗೌಡರ.ರಾಜ್ಯ ಡಾ.ವೀರಣ್ಣ ಚರಂತಿಮಠ.ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಅವರು ತಿರಂಗಾ ಯಾತ್ರೆಗೆ ಚಾಲನೆ ನೀಡಿದರು, ತಿರಂಗಾ ಯಾತ್ರೆಯಲ್ಲಿ ಎನ್.ಸಿ.ಸಿ ವಿದ್ಯಾರ್ಥಿಗಳು, ಅಕ್ಕನ ಬಳಗದ ಸದಸ್ಯರು, ಮಹಿಳಾ ಸ್ವ ಸಹಾಯ ಸಂಘಗಳಿ, ವಕೀಲರ ಸಂಘ, ವೈಧ್ಯರ ಸಂಘ, ರೋಟರಿ ಹಾಗೂ ಲೈನ್ಸ ಕ್ಲಭ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿದಂತೆ 6 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

# ಕಾರ್ಮಿಕ ವರ್ಗದ ಸಮಸ್ಯೆ ಪರಿಹರಿಸಲು ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

**ಕಲಬುರಗಿ,ಮೇ.21–**ದೇಶದ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇಂದು ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ದೇಶದ ಕಾರ್ಮಿಕರು ಮತ್ತಿತರ ದುಡಿಯುವ ಜನರ ವಿರೋಧಿ ನೀತಿಗಳನ್ನು ಕೈ ಬಿಡಬೇಕು ಮತ್ತು ಜ್ವಲಂತ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಆಗ್ರಹಿಸಿ ಎಐಯುಟಿಯುಸಿ ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಟನೆಗಳು ಇಂದು ಕರೆ ನೀಡಿದ್ದ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲಿಸಿ ಈ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಕೇಂದ್ರ ಸರ್ಕಾರ ಆಶಾ ಕಾರ್ಯಕರ್ತೆಯರ ಗೌರವಧನ/ ಪ್ರೋತ್ಸಾಹಧನಗಳನ್ನು ಹೆಚ್ಚಿಸಬೇಕು, ರಾಜ್ಯ ಸರ್ಕಾರ ಭವರಸೆ ನೀಡಿದಂತೆ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 10 ಸಾವಿರ ರೂ.ಪಾವತಿಸುವಂತೆ ಶೀಘ್ರ ಆದೇಶ ಹೊರಡಿಸಬೇಕು, ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಮಿಕರ ಸೇವೆಗಳನ್ನು ಖಾಯಂಗೊಳಿಸಿ ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕು, ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ 36 ಸಾವಿರ ರೂ.ನಿಗದಿ ಪಡಿಸಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷರು, ಕಾರ್ಯದರ್ಶಿ, ತಾಲ್ಲೂಕ ಜಂಟಿ ಕಾರ್ಯದರ್ಶಿ ಸಂಗೀತಾ, ಸದಸ್ಯರಾದ ಜಯಶ್ರೀ, ಇಂದುಬಾಯಿ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಮಳೆ ಹಾನಿ ಪ್ರದೇಶಕ್ಕೆ ಬಿಜೆಪಿ ನಾಯಕರ ಭೇಟಿ

ಮಳೆಯಿಂದ ಹಾನಿಗೊಳಗಾದ ಸಿಲ್ಕ್ ಬೋರ್ಡ್ ಜಂಕ್ಷನ್‌ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಭೇಟಿ ನೀಡಿ ಬೆಂಗಳೂರು ಜನರ ಜೀವನ ನರಕವಾಗಿಸುವುದೇ ನಿಮ್ಮ ಬ್ರ್ಯಾಂಡ್ ಬೆಂಗಳೂರಿನ ಉದ್ದೇಶವೇ? ಎಂದು ಭಿತ್ತಿಪತ್ರ ಹಿಡಿದು ಪ್ರಶ್ನಿಸಿದರು. ವಿಪಕ್ಷ ನಾಯಕರುಗಳಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಶಾಸಕ ಎಂ. ಸತೀಶ್ ರೆಡ್ಡಿ, ಮತ್ತಿತರ ಮುಖಂಡರು ಇದ್ದಾರೆ. ಸರ್ಕಾರದ ವಿರುದ್ಧ ಕಿಡಿಬೆಂಗಳೂರು, ಮೇ 20– ಬೆಂಗಳೂರಿನ ಮಳೆ ಹಾನಿ ಪ್ರದೇಶಗಳಿಗೆ ಬಿಜೆಪಿ ನಾಯಕರುಗಳ ನಿಯೋಗ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿತು.



ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕರುಗಳಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕ ಸತೀಶ್‌ರೆಡ್ಡಿ, ಸಿ.ಕೆ. ರಾಮಮೂರ್ತಿ ಸೇರಿದಂತೆ ಬಿಜೆಪಿ ನಾಯಕರುಗಳ ನಿಯೋಗ ಬೆಂಗಳೂರಿನ ಸಿಲ್ಕ್ ಬೋರ್ಡ್ ಜಂಕ್ಷನ್‌ಗೆ ಭೇಟಿ ನೀಡಿ ಮಳೆ ಹಾನಿಯನ್ನು ಪರಿಶೀಲಿಸಿತು.

ಬೆಂಗಳೂರಿನಲ್ಲಿ ಇಷ್ಟೆಲ್ಲಾ ಮಳೆಯಾದರೂ ಸರ್ಕಾರ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಮಳೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷ್ಯ ತಾಳಿದೆ ಎಂದು ನಾಯಕರುಗಳು ಕಿಡಿಕಾರಿದರು.ಬೆಂಗಳೂರಿನ ಜನರ ಜೀವನ ನರಕವಾಗಿಸುವುದೇ ನಿಮ್ಮ ಬ್ರ್ಯಾಂಡ್ ಬೆಂಗಳೂರಿನ ಉದ್ದೇಶವೇ ಉತ್ತರಿಸಿ ಡಿ.ಕೆ. ಶಿವಕುಮಾರ್. ಬ್ಯಾಡ್ ಬೆಂಗಳೂರು ಎಂಬೆಲ್ಲಾ ಭಿತ್ತಿ ಪತ್ರಗಳನ್ನು ಹಿಡಿದು ನಾಯಕರುಗಳು ಸರ್ಕಾರದ ವಿರುದ್ದ ಕಿಡಿಕಾರಿದರು.

ಮಳೆಯಿಂದ ಬೆಂಗಳೂರಿನ ಜನರ ಜೀವನ ನರಕವಾಗಿದೆ. ಸಾಕಷ್ಟು ತೊಂದರೆಯೂ ಆಗಿದೆ. ಇಷ್ಟಾದರೂ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಜನರ ನೆರವಿಗೆ ಧಾವಿಸಿಲ್ಲ ಎಂದು ಬಿಜೆಪಿ ನಾಯಕರುಗಳು ವಾಗ್ದಾಳಿ ನಡೆಸಿದರು.

ಮುಂದಿನ ದಿನಗಳಲ್ಲೂ ಭಾರೀ ಮಳೆಯಾಗಲಿದೆ. ಇಷ್ಟಾದರೂ ಮಳೆಯನ್ನು ಸಮರ್ಪಕವಾಗಿ ಎದುರಿಸಲು ಅಗತ್ಯ ಸಿದ್ದತೆಯನ್ನೆ ಮಾಡಿಕೊಂಡಿಲ್ಲ. ಸಣ್ಣ ಮಳೆಯಾದರೂ ಬೆಂಗಳೂರಿನ ಜನ ತೊಂದರೆಗೆ ಸಿಲುಕುವಂತಾಗಿದೆ. ಕಳೆದ 2 ವರ್ಷದಲ್ಲಿ ಸರ್ಕಾರ ಮಾಡಿದ್ದೇನು, ಇದೆಯಾ ಬ್ರ್ಯಾಂಡ್ ಬೆಂಗಳೂರು ಎಂದು ಬಿಜೆಪಿ ನಾಯಕರುಗಳು ಪ್ರಶ್ನಿಸಿದರು.

# ಜಾಗೃತ ಕ್ಷೇತ್ರ ಶಿಂಗಟಾಲೂರು ವೀರಭದ್ರೇಶ್ವರ ದೇವಸ್ಥಾನ



ಧರ್ಮ ಭೂಮಿಯಾದ ನಮ್ಮ ಭಾರತ ದೇಶವು ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಸಂಪ್ರದಾಯಗಳ ತವರೂರು. ಹೆಜ್ಜೆ ಹೆಜ್ಜೆಗೂ ತೀರ್ಥಕ್ಷೇತ್ರಗಳನ್ನು ಹೊಂದಿರುವ ಭರತ ಭೂಮಿಯಲ್ಲಿ ನೂರಾರು, ಸಾವಿರಾರು ದೇವತೆಗಳು ಪುಣ್ಯ ಪುರುಷರು, ಸಂತರು ಆಗಿ ಹೋಗಿದ್ದು ಪುಣ್ಯ ಭರತ ಭೂಮಿಯ ಮಣ್ಣಿನ ಪ್ರತಿ ಕಣವು ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಸುಗಂಧವನ್ನು ಎಲ್ಲೆಡೆ ಪಸರಿಸಿದೆ.

ಧರ್ಮ,ನ್ಯಾಯ, ಪುಣ್ಯ ಮುಂತಾದ ಮಾನವೀಯ ಮೌಲ್ಯಗಳನ್ನು ಧರ್ಮ ಕ್ಷೇತ್ರಗಳ ಮೂಲಕ ಬೋಧಿಸುತ್ತಿರುವ ನಮ್ಮ ಭಾರತೀಯ ದೇವಾಲಯ ಸಂಸ್ಕೃತಿಯಲ್ಲಿ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಶಿಂಗಟಾಲೂರು ಗ್ರಾಮದ ವೀರಭದ್ರೇಶ್ವರ ದೇವಸ್ಥಾನವು ಈ ಭಾಗದ ಜಾಗೃತ ಕ್ಷೇತ್ರ ಎಂದೇ ಹೆಸರಾಗಿದೆ.

ಸಿಂಗಟಾಲೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನವು ಪೂರ್ವಾಭಿಮುಖವಾಗಿ ಹರಿಯುತ್ತಿರುವ ತುಂಗಭದ್ರ ನದಿಯ ತೀರದ ಕಪೋತಗಿರಿ ಬೆಟ್ಟದ ಮೇಲೆ ನದಿಗೆ ಅಭಿಮುಖವಾಗಿ ಹಲವಾರು ದಶಕಗಳ ಹಿಂದೆಯೇ ಸ್ಥಾಪಿಸಲ್ಪಟ್ಟಿದ್ದು ಇತ್ತೀಚೆಗೆ ದೇವಸ್ಥಾನದ ಜೀರ್ಣೋದ್ಧಾರವಾಗಿ ನವೀನ ಶಿಲಾ ಮಂಟಪದಲ್ಲಿ ವೀರಭದ್ರೇಶ್ವರ ದೇವರು ಲಕ್ಷಾಂತರ ಭಕ್ತರ ಭಕ್ತಿಯ ದ್ಯೋತಕವಾಗಿ ಭಕ್ತ ರಕ್ಷಕನಾಗಿ ನೆಲೆ ನಿಂತಿದ್ದಾನೆ. ನಂಬಿದವರ ನಂಬಿಕೆಗೆ ಇಂಬು ಕೊಡುವಂತೆ ಶ್ರೀ ವೀರಭದ್ರೇಶ್ವರ ದೇಗುಲವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿದ್ದು, ಧರ್ಮಶ್ರದ್ಧೆ ಆಸ್ತಿಕತೆಗಳು ಕಡಿಮೆಯಾಗಿರುವ ಇಂದಿನ ದಿನಗಳಲ್ಲಿ ತನ್ನ ಹಿಂದಿನ ಗತವೈಭವವನ್ನು ಉಳಿಸಿಕೊಂಡು ಕನ್ನಡ ನಾಡಿನ ಧಾರ್ಮಿಕ ಪರಂಪರೆಯ ಸಾರವನ್ನು ಉಣ ಬಡಿಸುತ್ತಿದೆ.

ವೀರಭದ್ರೇಶ್ವರನ ಅವತಾರ.... ಪ್ರಜಾಪತಿ ಬ್ರಹ್ಮ ಎಂದು ಹೆಸರಾದ ದಕ್ಷನು ತನ್ನ 24 ಪುತ್ರಿಯರಲ್ಲಿ ಒಬ್ಬಳಾದ ಸತಿ ದೇವಿಯನ್ನು ಲಯಕರ್ತನಾದ ಶಿವನಿಗೆ ಕೊಟ್ಟು ವಿವಾಹ ಮಾಡಿದ್ದನು.


ಒಂದು ಬಾರಿ ಕೈಲಾಸದಲ್ಲಿ ಶಿವನ ಒಡ್ಡೋಲಗದಲ್ಲಿ ವಿಪರೀತ ಸಂಭ್ರಮ, ಉತ್ಸವಗಳು ನಡೆಯುತ್ತಿರುವಾಗ ಶಿವನ ಮಾವನಾದ ದಕ್ಷ ಪ್ರಜಾಪತಿಯು ಅಲ್ಲಿಗೆ ಭೇಟಿ ಕೊಟ್ಟನು. ಆ ಸಮಯದಲ್ಲಿ ಅಲ್ಲಿ ಹಾಜರಿದ್ದ ಯಕ್ಷ, ಗಂಧರ್ವ, ದೇವತೆಗಳು,ಕಿನ್ನರ ಕಿಂಪುರುಷರು ದಕ್ಷನನ್ನು ನೋಡಿ ಎದ್ದು ಆತನಿಗೆ ಗೌರವದಿಂದ ನಮಿಸಿದರು. ಆದರೆ ಬ್ರಹ್ಮನೊಂದಿಗೆ ಆಪ್ತ ಸಮಾಲೋಚನೆಯಲ್ಲಿ ತೊಡಗಿದ್ದ ಪರಶಿವನು ಆತನನ್ನು ಗಮನಿಸದೇ ಹೋದನು. ಇದನ್ನು ತಪ್ಪಾಗಿ ಭಾವಿಸಿದ ದಕ್ಷಬ್ರಹ್ಮನು ತನಗೆ ಅವಮಾನ ಮಾಡಲೆಂದೇ ಶಿವನು ತನ್ನನ್ನು ಕಡೆಗಣಿಸಿರುವುದಾಗಿ ಭಾವಿಸಿ ಶಿವನನ್ನು ಶಪಿಸಿ ಅಲ್ಲಿಂದ ಹೊರಟುಬಿಟ್ಟನು.

ಶಿವನ ವ್ಯಸ್ತತೆ ಮತ್ತು ದಕ್ಷಬ್ರಹ್ಮನ ಅಹಮಿಕೆಗಳನ್ನು ಕಂಡುಕೊಂಡ ನಂದಿಯು ಆತನನ್ನು ಬೆಂಬತ್ತಿ ಹೋಗಿ ಆಕಸ್ಮಿಕ ಅಚಾತುರ್ಯದಿಂದ ಹೀಗಾಗಿದ್ದು ಉದ್ದೇಶಪೂರ್ವಕವಾಗಿ ಶಿವನು ಹೀಗೆ ಮಾಡಿಲ್ಲ ಎಂಬುದನ್ನು ತಿಳಿಸಲು ಪ್ರಯತ್ನಿಸಿದರೂ ಕೂಡ ಅದು ನಿಷ್ಫಲವಾಯಿತು.ಇದರಿಂದ ಬೇಸರಗೊಂಡ ನಂದಿಯು ಕುರಿಯಂತೆ ನೀನು ಮಾಡಿದ್ದೇ ಸರಿ ಎಂದು ಗೋಣು ಅಲ್ಲಾಡಿಸುವ ನೀನು ಹೋತದ ಮುಖವನ್ನೇ ಹೊತ್ತು ತಿರುಗು ಎಂದು ಶಪಿಸಿದನು.

ಕೆಲ ವರ್ಷಗಳ ನಂತರ ದಕ್ಷನು ಮಹಾಯಾಗವೊಂದನ್ನು ಮಾಡಲು ಶಿವ ಮತ್ತು ಸತಿ ದೇವಿಯರನ್ನು ಹೊರತುಪಡಿಸಿ ತನ್ನೆಲ್ಲ ಹೆಣ್ಣು ಮಕ್ಕಳು, ಅಳಿಯಂದಿರನ್ನು ಬಂಧು ಬಾಂಧವರನ್ನು, ಋಷಿಗಳನ್ನು, ದೇವಾನುದೇವತೆಗಳು, ಕಿನ್ನರ ಕಿಂಪುರುಷರನ್ನು ಆ ಯಾಗಕ್ಕೆ ಆಹ್ವಾನಿಸಿದ್ದನು.

ದಕ್ಷನು ಮಾಡುತ್ತಿರುವ ಮಹಾ ಯಜ್ಞದ ಸಂಭ್ರಮದ ವರ್ಣನೆಗಳನ್ನು ಅವರಿವರಿಂದ ಕೇಳಿದ ಸತಿ ದೇವಿಯು ತಾವು ಕೂಡ ಅಲ್ಲಿಗೆ ಮಹಾ ಯಜ್ಞದ ಸಂಭ್ರಮದಲ್ಲಿ ಪಾಲ್ಗೊಳ್ಳಲು ಹೋಗೋಣ ಎಂದು ಪತಿಯನ್ನು ಕೇಳಿಕೊಂಡಳು. ಆಹ್ವಾನವಿಲ್ಲದೆ ಹೋದರೆ ಅದು ತಂದೆಯ ಮನೆಯಾದರೂ ಹೋಗಬಾರದಷ್ಟೇ ಎಂದು ಶಿವನು ಅದೆಷ್ಟೇ ತಿಳಿಹೇಳಲು ಪ್ರಯತ್ನಿಸಿದರೂ ಕೇಳದ ಸತಿದೇವಿ ತನ್ನ ಪತಿಯ ಮಾತನ್ನು ಮೀರಿ ತನ್ನ ತಂದೆ ದಕ್ಷನು ಮಾಡುತ್ತಿರುವ ಯಜ್ಞ ಸ್ಥಳಕ್ಕೆ ಹೋದಳು.

ಯಜ್ಞ ಕಾರ್ಯದಲ್ಲಿ ನಿರತನಾಗಿದ್ದ ದಕ್ಷಬ್ರಹ್ಮನನ್ನು ಹವಿಸ್ಸನ್ನು ಸ್ವೀಕರಿಸಲು ಶಿವನೇ ಆಹ್ವಾನಿತನಾಗಿಲ್ಲ ಎಂದರೆ ಯಜ್ಞ ನಿಷ್ಫಲವಾಗುವುದಿಲ್ಲವೇ ಎಂದು ಪ್ರಶ್ನಿಸಿದ ಮಹರ್ಷಿಗಳನ್ನು ದಕ್ಷಬ್ರಹ್ಮನು ಗದರಿ ಸುಮ್ಮನಾಗಿಸಿದನು. ಅದೇ ಸಮಯದಲ್ಲಿ ಅಲ್ಲಿಗೆ ಬಂದ ಮಗಳು ಸತಿ ದೇವಿಯನ್ನು ಕಂಡು ಮತ್ತಷ್ಟು ಕ್ರೋಧದಿಂದ ಆಕೆಯ ಪತಿಯನ್ನು ಮತ್ತು ಆಕೆಯನ್ನು ನಿಂದಿಸಿದ



ದಕ್ಷಬ್ರಹ್ಮನು ಯಜ್ಞ ನಡೆಯುವ ಸ್ಥಳದಿಂದ ಹೊರಟು ಹೋಗು ಎಂದು ಅವಮಾನಿಸಿದನು.

ಅವಮಾನದಿಂದ ತಪ್ತಳಾದ ಸತಿದೇವಿಯು ಪತಿಯ ಮಾತನ್ನು ಮೀರಿ ಬಂದ ತನಗೆ ತಕ್ಕ ಶಾಸ್ತಿಯಾಯಿತು, ಇಂತಹ ಮುಖವನ್ನು ಹೊತ್ತು ಹೇಗೆ ಮರಳಿ ಹೋಗಬೇಕು ಎಂದು ನೋವಿನಿಂದ ತಂದೆ ಮಾಡುತ್ತಿರುವ ಯಜ್ಞದ ಕುಂಡದಲ್ಲಿ ಹಾರಿ ತನ್ನ ಪ್ರಾಣವನ್ನು ಅರ್ಪಿಸಿದಳು. ಸತಿ ದೇವಿಯ ಆತ್ಮಹತ್ಯೆಯ ವಾರ್ತೆಯನ್ನು ನಾರದರಿಂದ ಕೇಳಿ ತಿಳಿದ ಶಿವನ ಇಡೀ ದೇಹ ಕ್ರೋಧದಿಂದ ನಡುಗತೊಡಗಿತು.. ಕೈಯಲ್ಲಿ ಡಮರವನ್ನು ಹಿಡಿದು ದೇಹದ ನರ ನಾಡಿಗಳಲ್ಲಿ ಕ್ರೋಧಭರಿತನಾದ ಶಿವನು ರುದ್ರನರ್ತನಗೈದನು. ತಲೆಯ ಮೇಲೆ ಕಟ್ಟಿದ ಆತನ ಜಟೆ ಬಿಚ್ಚಿ ಹೋಯಿತು. ಆತ ತನ್ನ ಮೂರನೆಯ ಕಣ್ಣನ್ನು ತೆರೆದಾಗ ಹೊರಟ ಕ್ರೋಧದ ಕಿಡಿಗಳಿಂದ ಪ್ರಕಾಶಮಾನವಾದ ವೀರಭದ್ರ ದೇವರ ಅವತಾರ ಮೂಡಿ ಬಂತು. (ಇದನ್ನು ಹಂಪಿಯ ಹರಿಹರ ದೇವ ರಚಿಸಿರುವ ವೀರಭದ್ರ ದೇವರ ರಗಳೆಯಲ್ಲಿ ಕಾಣಬಹುದು ). ಆದರೆ ನಮ್ಮ ಜನಪದರು ಶಿವನ ಜಟೆಯಿಂದಲೇ ವೀರಭದ್ರ ದೇವರ ಅವತಾರವಾಯಿತು ಎಂದು ಹೇಳುತ್ತಾರೆ.

ಹೀಗೆ ಉದ್ಭವವಾದ ವೀರಭದ್ರನು ಕರ್ಣಕುಂಡಲ, ಸೂರ್ಯನನ್ನೇ ನಾಚಿಸುವ ಕಣ್ಣುಗಳ ಏಕ ಜಡೆ ಲಿಂಗ, ಶಿರೋಮಾಲೆ, ಕುಡಿ ಮೀಸೆ, ಕೋರೆಹಲ್ಲು, ವೀರ ಪದಕ ಮೊದಲಾದವುಗಳಿಂದ ಕಂಗೊಳಿಸುತ್ತಿದ್ದ.

ತನ್ನ ಜನನಕ್ಕೆ ಕಾರಣವಾದ ಶಿವನಿಗೆ ವಂದಿಸಿದ ವೀರಭದ್ರ ದೇವನು ನಾನೇನು ಮಾಡಬೇಕು ಅಪ್ಪಣೆ ನೀಡು ಎಂದು ಕೇಳಿದಾಗ ಶಿವನು ಕ್ರೋಧದಿಂದ ತನ್ನ ಪತ್ನಿ ಸತಿದೇವಿಯ ಮರಣಕ್ಕೆ ಕಾರಣನಾದ ದಕ್ಷಬ್ರಹ್ಮನನ್ನು ಧ್ವಂಸ ಮಾಡು ಎಂದು ಆದೇಶಿಸಿದನು. ಶಿವನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ ವೀರಭದ್ರನು ಕಾಳಿಕಾದೇವಿ ಮತ್ತು ತನ್ನ ಗಣದೊಂದಿಗೆ ಯಜ್ಞ ಶಾಲೆಯನ್ನು ಹೊಕ್ಕು ಎಲ್ಲರ ದಿಕ್ಕು ತಪ್ಪುವಂತೆ ಹೊಡೆದಟ್ಟಿ ಯಜ್ಞ ಕುಂಡವನ್ನು ನಾಶ ಮಾಡಿ ದಕ್ಷಬ್ರಹ್ಮನನ್ನು ಕೊಂದು ಶಿವನ ಬಳಿ ಮರಳಿದನು. ಹೀಗೆ ಶಿವನ ಅಂಶದಿಂದ ಜನಿಸಿದ ವೀರಭದ್ರನನ್ನು ದೇಶದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ಪೂಜಿಸುತ್ತಾರೆ.

ಹತ್ತು ಹಲವಾರು ಸ್ಥಳ ಪುರಾಣಗಳನ್ನು ಹೊಂದಿರುವ ಸಿಂಗಟಾಲೂರಿನ ವೀರಭದ್ರೇಶ್ವರ ದೇವಸ್ಥಾನವು "ದುಷ್ಟ ಶಿಕ್ಷಣ ಶಿಷ್ಟ ರಕ್ಷಣಕ್ಕೆ ವೀರಭದ್ರ ಸ್ವಾಮಿ ಇಲ್ಲಿ ನೆಲೆಸಿದ್ದಾನೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಕಪೋತಗಿರಿಯ ಕೊನೆಯ ಭಾಗವಾದ ನಂದಿ ಬೆಟ್ಟದಲ್ಲಿ ವೀರಭದ್ರ ದೇವರ ದೇವಸ್ಥಾನವಿದ್ದು ಪಕ್ಕದಲ್ಲಿಯೇ ಮಹಾಕಾಳಿಯ ದೇವಸ್ಥಾನವು ಇದೆ. ಅಲ್ಲಿಯ ಬೆಟ್ಟದ ನಿರ್ದಿಷ್ಟ ಭಾಗದಲ್ಲಿ ಅಗೆದಾಗ ದೊರೆತ ವೀರಭದ್ರೇಶ್ವರ ಮೂರ್ತಿಯನ್ನು ಹಲವಾರು ದಶಕಗಳ ಹಿಂದೆಯೇ ಶಿಂಗಟಾಲೂರಿನ ಜನರು ಶಾಸ್ತ್ರೋಕ್ತ ವಿಧಿ ವಿಧಾನಗಳಿಂದ ಪೂಜಿಸಿ ಪ್ರತಿಷ್ಠಾಪಿಸಿದ್ದು ಹತ್ತು ಹಲವು ಪವಾಡಗಳನ್ನು ಕಣ್ಣಾರೆ ಕಂಡಿರುವ ಜನರು ಇಲ್ಲಿರುವ ವೀರಭದ್ರ ದೇವರನ್ನು ಜಾಗೃತ ದೇವರೆಂದು ಆತನ ಗುಡಿ ಇರುವ ಭಾಗವನ್ನು ಜಾಗೃತ ಕ್ಷೇತ್ರವೆಂದು ಕರೆದಿದ್ದಾರೆ.

ಶ್ರಾವಣ ಮತ್ತು ಕಾರ್ತಿಕ ಮಾಸಗಳ ಕೊನೆಯ ಸೋಮವಾರ ಬೃಹತ್ ಪಲ್ಲಕ್ಕಿ ಉತ್ಸವ ಮತ್ತು ಪ್ರತಿ ಸೋಮವಾರಗಳಂದು ಕಿರು ಪಲ್ಲಕ್ಕಿ ಉತ್ಸವಗಳು, ಪ್ರತಿ ವರ್ಷ ಯುಗಾದಿಯ ನಂತರ ನಡೆಯುವ ವೀರಭದ್ರೇಶ್ವರ ರಥೋತ್ಸವ, ತಮ್ಮ ಇಷ್ಟಾರ್ಥಗಳನ್ನು ಸಿದ್ದಿಗಾಗಿ ವೀರಭದ್ರೇಶ್ವರ ದೇವರ ಮುಂದೆ ಅಗ್ನಿಯನ್ನು ಪ್ರಜ್ವಲಿಸಿ ಕೊಂಡದ ತಯಾರಿ ಮಾಡಿಕೊಂಡು ಕೊಂಡ ಹಾಯುವರು. ಪುರವಂತರಿಂದ ವೀರಭದ್ರೇಶ್ವರನ ಕಾರ್ಣಿಕವು ಕೂಡ ನಡೆಯುತ್ತದೆ. ವೀರಭದ್ರೇಶ್ವರ ದೇವರಿಗೆ ಕಾಣಿಕೆಯನ್ನು ಸಮರ್ಪಿಸುವುದು, ಜಾತ್ರೆಯ ನಂತರ ನಡೆಯುವ ಧರ್ಮಸಭೆ, ಸಂಕ್ರಾಂತಿ ಹಬ್ಬದ ಆಚರಣೆಗಳು ಹೀಗೆ ಹತ್ತು ಹಲವು ಕಾರಣಗಳಿಂದ ಶಿಂಗಟಾಲೂರಿನ ಶ್ರೀ ವೀರಭದ್ರೇಶ್ವರ ದೇವಸ್ಥಾನವು ಭಕ್ತರ ಮನದ ಇಚ್ಛೆಗಳನ್ನು ಪೂರೈಸುವ ಅವರ ನಂಬಿಕೆಯನ್ನು ಹೆಚ್ಚಿಸಿದ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಬೆಟ್ಟದ ಮೇಲೆ ನಿಂತು ನೋಡಿದರೆ ಸುತ್ತ ಹಸಿರು ವನ ರಾಶಿ, ಮುಂದೆ ಹರಿಯುವ ತುಂಗಭದ್ರೆಯ ನೀರು, ಕಣ್ಮನ ಸೆಳೆಯುವ ಪ್ರಕೃತಿ ಸೌಂದರ್ಯದ ಬೀಡು ನಮ್ಮ ವೀರಭದ್ರೇಶ್ವರನ ನೆಲೆವೀಡು ಶಿಂಗಟಾಲೂರು.

ಬನ್ನಿ ಎಲ್ಲರೂ ಶ್ರೀ ಶಿಂಗಟಾಲೂರು ವೀರಭದ್ರೇಶ್ವರನ ದರ್ಶನ ಮಾಡಿ ದೇವರ ಕೃಪೆಗೆ ಪಾತ್ರರಾಗೋಣ.

ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್........

# ವಿರಾಟ್ ಕೊಹ್ಲಿಗೆ ಭಾರತ ರತ್ನ ವಿರಾಟ್ ಕೊಹ್ಲಿಗೆ ಭಾರತ ರತ್ನ ಪ್ರಶಸ್ತಿ ನೀಡಲು ಮನವಿ

**ನವದೆಹಲಿ,ಮೇ.21–** ಟೀಮ್ ಇಂಡಿಯಾದ ಸ್ಟಾರ್ ಕ್ರಿಕೆಟಿಗ ವಿರಾಟ್ ಕೊಹ್ಲಿ 2008 ರಿಂದ ಭಾರತೀಯ ಕ್ರಿಕೆಟ್‌ಗೆ ಸೇವೆ ಸಲ್ಲಿಸುತ್ತಿದ್ದಾರೆ. ವಿರಾಟ್ ತಮ್ಮ ಜೀವನದ 14 ವರ್ಷಗಳನ್ನು ಕ್ರಿಕೆಟ್ ಗೆ ಮೀಸಲಿಟ್ಟಿದ್ದಾರೆ.ಅವರು ಏಕಾಂಗಿಯಾಗಿ ಭಾರತಕ್ಕಾಗಿ ಹಲವು ಪಂದ್ಯಗಳನ್ನು ಗೆಲ್ಲಿಸಿ ಕೊಟ್ಟಿದ್ದಾರೆ. 36 ವರ್ಷದ ಈ ಆಟಗಾರನನ್ನು ಆಧುನಿಕ ಕ್ರಿಕೆಟ್‌ನ ಅತ್ಯುತ್ತಮ ಬ್ಯಾಟ್ಸ್‌ಮ್ಯಾನ್‌ಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.

ವಿರಾಟ್ ಕೊಹ್ಲಿ ಮೇ 12 ರಂದು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ಅವರು ತಮ್ಮ ಕ್ರಿಕೆಟ್ ಮೂಲಕ ಭಾರತಕ್ಕೆ ಲೆಕ್ಕವಿಲ್ಲದಷ್ಟು ದಾಖಲೆಗಳನ್ನು ನಿರ್ಮಿಸಿದ್ದಾರೆ. ವಿರಾಟ್ ಅವರ ಸಾಧನೆಗಳಿಗೆ ಸೂಕ್ತ ಗೌರವ ಸಲ್ಲಿಸಲು ಸುರೇಶ್ ರೈನಾ ಸರ್ಕಾರವನ್ನು ಭಾರತ ರತ್ನ ಪ್ರಶಸ್ತಿ ನೀಡುವಂತೆ ಒತ್ತಾಯಿಸಿದ್ದಾರೆ.ಭಾರತೀಯ ಕ್ರಿಕೆಟ್‌ಗೆ ನೀಡಿದ ಕೊಡುಗೆಗಾಗಿ ವಿರಾಟ್ ಕೊಹ್ಲಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ರೈನಾ ಹೇಳಿದ್ದಾರೆ



ಭಾರತ ರತ್ನ ಪಡೆದ ಏಕೈಕ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್.ದೆಹಲಿ ಕ್ರಿಕೆಟಿಗನಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ಭಾರತ ರತ್ನ ಪ್ರಶಸ್ತಿ ನೀಡಬೇಕೆಂಬ ಬೇಡಿಕೆ ಬಂದಿದೆ.


ಅವರು ಭಾರತ ಪರ ಒಟ್ಟು 123 ಟೆಸ್ಟ್ ಪಂದ್ಯಗಳನ್ನು ಆಡಿದ್ದು, 46.85 ಸರಾಸರಿಯಲ್ಲಿ 30 ಶತಕಗಳು ಮತ್ತು 31 ಅರ್ಧಶತಕಗಳೊಂದಿಗೆ 9230 ರನ್ ಗಳಿಸಿದ್ದಾರೆ.ಈಗ ಸುರೇಶ್ ರೈನಾ ವಿರಾಟ್ ಕೊಹ್ಲಿಗೆ ಭಾರತ ರತ್ನ ನೀಡಬೇಕೆಂದು ಒತ್ತಾಯಿಸಿದ್ದಾರೆ, ಇದರಿಂದ ಭಾರತೀಯ ಕ್ರಿಕೆಟ್‌ಗೆ ಅವರ ಅನುಪಮ ಕೊಡುಗೆಯನ್ನು ಗೌರವಿಸಬಹುದು. ಕಾರ್ಯಕ್ರಮವೊಂದರಲ್ಲಿ ರೈನಾ, ವಿರಾಟ್ ಕೊಹ್ಲಿ ಸಾಧಿಸಿದ ಎಲ್ಲಾ ಸಾಧನೆಗಳಿಗಾಗಿ,




ಅವರು ಭಾರತ ಮತ್ತು ಭಾರತೀಯ ಕ್ರಿಕೆಟ್‌ಗಾಗಿ ನೀಡಿದೆ ಕೊಡುಗೆ ಗಮನಿಸಿ, ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು. ಭಾರತ ಸರ್ಕಾರ ಅವರಿಗೆ ಭಾರತ ರತ್ನ ನೀಡಬೇಕು ಎಂದು ಹೇಳಿದ್ದಾರೆ.ದೆಹಲಿಯಲ್ಲಿ ಅವರ ನಿವೃತ್ತಿ ಪಂದ್ಯವನ್ನು ಆಯೋಜಿಸಲು ರೈನಾ ಬಿಸಿಸಿಐಗೆ ಒತ್ತಾಯಿಸಿದ್ದಾರೆ.

36 ವರ್ಷದ ಕೊಹ್ಲಿ ದೀರ್ಘಾವಧಿಯ ಕ್ರಿಕೆಟ್‌ನಲ್ಲಿ ಭಾರತದ ಅತಿ ಹೆಚ್ಚು ರನ್ ಗಳಿಸಿದ ಆಟಗಾರ. ಇದಕ್ಕೂ ಮೊದಲು, 2024 ರಲ್ಲಿ ಟಿ 20 ವಿಶ್ವಕಪ್ ಗೆದ್ದ ನಂತರ, ವಿರಾಟ್ ಇದಕ್ಕೂ ವಿದಾಯ ಹೇಳಿದ್ದರು. ಕಳೆದ ವರ್ಷ ಟಿ20 ಅಂತಾರಾಷ್ಟ್ರೀಯ ಪಂದ್ಯಗಳಿಂದ ನಿವೃತ್ತರಾದ ಅವರು ಈಗ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಆಡಲಿದ್ದಾರೆ. ವಿರಾಟ್ ಮೂರು ಸ್ವರೂಪದ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 550 ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದು, ಇದರಲ್ಲಿ ಅವರು 27,599 ರನ್‌ಗಳನ್ನು ಗಳಿಸಿದ್ದಾರೆ. 2008 ರಲ್ಲಿ ಪಾದಾರ್ಪಣೆ ಮಾಡಿದ ನಂತರ ವಿರಾಟ್ ಒಟ್ಟು 82 ಶತಕಗಳನ್ನು ಬಾರಿಸಿದ್ದಾರೆ.

# ಖ್ಯಾತ ಖಗೋಳ ಭೌತಶಾಸ್ತ್ರಜ್ಞ, ವಿಜ್ಞಾನ ಸಂವಹನಕಾರ ವಿಷ್ಣು ನಾರ್ಲಿಕರ್ ನಿಧನ



**ಪುಣೆ, ಮೇ21 –**ಖ್ಯಾತ ಖಗೋಳ ಭೌತಶಾಸ್ತ್ರಜ್ಞ, ವಿಜ್ಞಾನ ಸಂವಹನಕಾರ ಮತ್ತು ಪದ್ಮವಿಭೂಷಣ ಪುರಸ್ಕೃತ ಡಾ.ಜಯಂತ್ (87) ವಿಷ್ಣು ನಾರ್ಲಿಕರ್ ಅವರು ಪುಣೆಯಲ್ಲಿ ನಿಧನರಾಗಿದ್ದಾರೆ. ಅವರು ಮಲಗಿದ ವೇಳೆಯೇ ಕೊನೆಯುಸಿರೆಳೆದರೆಂದು ಎಂದು ಕುಟುಂಬ ಸದಸ್ಯರು ದೃಢಪಡಿಸಿದ್ದಾರೆ. ಮೃತರಿಗೆ ಮೂವರು ಹೆಣ್ಣುಮಕ್ಕಳು ಇದ್ದಾರೆ. ನಾಳೆ ಅಂತ್ಯಕ್ರಿಯೆ ನಡೆಯುವ ಸಾಧ್ಯತೆಯಿದೆ.

ನಾಲಿರ್ಕರ್ ಅವರು ಹಲವಾರು ವಿಜ್ಞಾನ ಪುಸ್ತಕಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ. ಆಕರ್ಷಕ ವೈಜ್ಞಾನಿಕ ಕಾದಂಬರಿ ಬರವಣಿಗೆಗೆ ಹೆಸರುವಾಸಿಯಾಗಿದ್ದರು. ದೂರದರ್ಶನ ಮತ್ತು ರೇಡಿಯೋ ಕಾರ್ಯಕ್ರಮಗಳ ಮೂಲಕ ಪ್ರೇಕ್ಷಕರನ್ನು ತಲುಪಿ, ಸಂಕೀರ್ಣ ವೈಜ್ಞಾನಿಕ ಪರಿಕಲ್ಪನೆಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ್ದರು.1938ರ ಜುಲೈ 19ರಂದು ಜನಿಸಿದ ಅವರು, ತಮ್ಮ ಬಾಲ್ಯವನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯ (ಬಿಎಚ್‌ಯು) ಕ್ಯಾಂಪಸ್ ನಲ್ಲಿ ಕಳೆದಿದ್ದರು. ಅಲ್ಲಿ ಅವರ ತಂದೆ ವಿಷ್ಣು ವಾಸುದೇವ ನಾರ್ಲಿಕರ್ ಗಣಿತ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ನಂತರ ಅವರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು, ಅಲ್ಲಿ ಅವರಿಗೆ ಟೈಸನ್ ಪದಕವನ್ನು ನೀಡಲಾಯಿತು ಮತ್ತು ಗಣಿತ ಟ್ರಿಪೋಸ್‌ನಲ್ಲಿ ಅವರ ಅತ್ಯುತ್ತಮ ಪ್ರದರ್ಶನಕ್ಕಾಗಿ ರಾಂಗ್ಲರ್ ಎಂದು ಗುರುತಿಸಲ್ಪಟ್ಟರು.ವಿಶ್ವವಿಜ್ಞಾನ ಮತ್ತು ವಿಜ್ಞಾನದ ಜನಪ್ರಿಯತೆಯಲ್ಲಿ ಪ್ರವರ್ತಕರಾಗಿ ದ್ದನಾರ್ಲಿಕರ್, ಪ್ರಮುಖ ವೈಜ್ಞಾನಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಮತ್ತು ಸಂಶೋಧಕರ ಪೀಳಿಗೆಯನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತಕ್ಕೆ ಹಿಂದಿರುಗಿದ ನಂತರ, ನಾರ್ಲಿಕರ್ 1972 ರಲ್ಲಿ ಟಾಟಾ ಇನ್ಸಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸೇರಿದ್ದರು. 1989ರವರೆಗೆ ಸೈದ್ಧಾಂತಿಕ ಖಗೋಳ ಭೌತಶಾಸ್ತ್ರ ಗುಂಪನ್ನು ಮುನ್ನಡೆಸಿದರು. ಆ ಸಮಯ ದಲ್ಲಿ ಗುಂಪು ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿತು. 1988ರಲ್ಲಿ, ವಿಶ್ವವಿ ದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ನಗರದ ಸಾವಿತ್ರಿಬಾಯಿ ಫುಲೆ ಪುಣೆ ವಿಶ್ವವಿದ್ಯಾಲಯದ ಆವರಣ ದಲ್ಲಿ ಅಂತರ-ವಿಶ್ವವಿದ್ಯಾಲಯ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರಕೇಂದ್ರ (ಐಯುಸಿಎಎ) ಸ್ಥಾಪಿಸುವ ಕೆಲಸವನ್ನು ಅವರಿಗೆ ವಹಿಸಿತು. ಸ್ಥಾಪಕ ನಿರ್ದೇಶಕರಾಗಿ, ಅವರು 2003 ರಲ್ಲಿ ನಿವೃತ್ತರಾಗುವವರೆಗೂ ಐಯುಸಿಎಎಯನ್ನು ಮುನ್ನಡೆಸಿ ದರು.

ಅಂದಿನಿಂದ ಈ ಕೇಂದ್ರವು ಖಗೋಳಶಾಸ್ತ್ರದಲ್ಲಿ ಸಂಶೋಧನೆ ಮತ್ತು ಶಿಕ್ಷಣಕ್ಕಾಗಿ ಜಾಗತಿಕವಾಗಿ ಗೌರವಾನ್ವಿತ ಕೇಂದ್ರವಾಗಿದೆ. ಅವರು ಎಮೆರಿಟಸ್ ಪ್ರಾಧ್ಯಾಪಕರಾಗಿ ಐಯುಸಿಎಎ ಜೊತೆ ತಮ್ಮ ಸಂಬಂಧವನ್ನು ಮುಂದುವರೆಸಿದ್ದರು. ಡಾ. ನಾರ್ಲಿಕರ್ ಅವರ ಸಂಶೋಧನೆ ಮತ್ತು ವಿಜ್ಞಾನ ಸಂಪರ್ಕ ಎರಡಕ್ಕೂ ಅಂತರರಾಷ್ಟ್ರೀಯ ಮನ್ನಣೆ ದೊರೆಕಿದೆ. 2012ರಲ್ಲಿ, ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್ ಅವರನ್ನು ವಿಜ್ಞಾನದಲ್ಲಿ ಶ್ರೇಷ್ಠತೆಯ ಕೇಂದ್ರವನ್ನು ಸೃಷ್ಟಿಸಿದ್ದಕ್ಕಾಗಿ ಗೌರವಿಸಿತ್ತು. ಇದಕ್ಕೂ ಮೊದಲು, 1996ರಲ್ಲಿ ಜನಪ್ರಿಯ ವಿಜ್ಞಾನ ಬರವಣಿಗೆ ಮತ್ತು ಸಂವಹನಕ್ಕೆ ನೀಡಿದ ಕೊಡುಗೆಗಳಿಗಾಗಿ ಯುನೆಸ್ಕೋ ಅವರಿಗೆ ಕಳಿಂಗ ಪ್ರಶಸ್ತಿಯನ್ನು ನೀಡಿತ್ತು. 1965ರಲ್ಲಿ ಕೇವಲ 26ನೇ ವಯಸ್ಸಿನಲ್ಲಿ ನಾರ್ಲಿಕರ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 2004 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಲಭಿಸಿದ್ದು, 2011ರಲ್ಲಿ, ಮಹಾರಾಷ್ಟ್ರ ಸರ್ಕಾರವು ಅದರ ಅತ್ಯುನ್ನತ ನಾಗರಿಕ ಗೌರವವಾದ ಮಹಾರಾಷ್ಟ್ರ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಮರಾಠಿಯಲ್ಲಿ ಬರೆದ ಅವರ ಆತ್ಮಚರಿತ್ರೆಯು 2014ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದುಕೊಂಡಿದೆ. ಅವರನ್ನು ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಲಾಗಿತ್ತು. ಆದರೆ ಅನಾರೋಗ್ಯದ ಕಾರಣ 2021ರಲ್ಲಿ ನಾಸಿಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ.

# ಇಂದು ಅಂತರರಾಷ್ಟ್ರೀಯ ಚಹಾ ದಿನ

**ಜಗತ್ತು ಮೇ 21 ರಂದು ಅಂತರರಾಷ್ಟ್ರೀಯ ಚಹಾ ದಿನವನ್ನು ಆಚರಿಸುತ್ತದೆ. ಚಹಾ ಉದ್ಯಮದ ಕೊಡುಗೆಗಳನ್ನು ಗುರುತಿಸುವುದು ಮತ್ತು ಈ ಪ್ರದೇಶದಲ್ಲಿ ನ್ಯಾಯಯುತ ವ್ಯಾಪಾರ ಮತ್ತು ಹೂಡಿಕೆಯನ್ನು ಉತ್ತೇಜಿಸುವುದು ಇದರ ಗುರಿಯಾಗಿದೆ. ಅಲ್ಲದೆ, ಅಂತರರಾಷ್ಟ್ರೀಯ ಚಹಾ ದಿನವು ಚಹಾ ಮತ್ತು ಚಹಾ ವ್ಯವಹಾರದಲ್ಲಿ ಕೆಲಸ ಮಾಡುವ ಜನರಿಗೆ ಮನ್ನಣೆ ನೀಡುವುದನ್ನು ಒಳಗೊಂಡಿದೆ.**



# ವಾಘಾ ಗಡಿಯಲ್ಲಿ ಬೀಟಿಂಗ್ ರಿಟ್ರೀಟ್ ಪುನಾರಂಭ

**ನವದೆಹಲಿ, ಮೇ 21–** ಭಾರತ ಮತ್ತು ಪಾಕಿಸ್ತಾನದ ನಡುವಿನ ಅಟ್ಟಾರಿ-ವಾಘಾ ಗಡಿಯಲ್ಲಿ ಅಪ್ರತಿಮ ಬೀಟಿಂಗ್ ರಿಟ್ರೀಟ್ ಸಮಾರಂಭದ ಪ್ರಮಾಣವು ಇಂದಿನಿಂದ ಪುನರಾರಂಭಗೊಳ್ಳಲಿದೆ.

ಸಮಾರಂಭವು ಮುಂದುವರಿಯುತ್ತದೆಯಾದರೂ, ಇದು ಬದಲಾದ ಪ್ರೋಟೋಕಾಲ್ ಗಳ ಅಡಿಯಲ್ಲಿ ನಡೆಯಲಿದೆ. ಗಡಿ ಗೇಟ್ ಗಳನ್ನು ಸಾಂಕೇತಿಕವಾಗಿ ತೆರೆಯದೆ ಅಥವಾ ಭಾರತದ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮತ್ತು ಪಾಕಿಸ್ತಾನ ರೇಂಜರ್ಗಳ ನಡುವಿನ ಸಾಂಪ್ರದಾಯಿಕ ಹಸ್ತಲಾಘವವಿಲ್ಲದೆ ಜರುಗಲಿದೆ.ಆದರೆ, ಹೆಚ್ಚಿನ ಭದ್ರತಾ ವ್ಯವಸ್ಥೆಗಳ ಅಡಿಯಲ್ಲಿ ಪ್ರೇಕ್ಷಕರಿಗೆ ಭಾರತದ ಕಡೆಯಿಂದ ಸಮಾರಂಭವನ್ನು ವೀಕ್ಷಿಸಲು ಅವಕಾಶ ನೀಡಲಾಗುವುದು ಎಂದೂ ಮೂಲಗಳು ತಿಳಿಸಿವೆ.ಬೀಟಿಂಗ್ ರಿಟ್ರೀಟ್ ಸಮಾರಂಭವು 1959 ರಿಂದ ಉಭಯ ದೇಶಗಳ ನಡುವಿನ ಸಂಪ್ರದಾಯವಾಗಿದೆ. ಪ್ರಮಾಣಿತ ಪ್ರೋಟೋಕಾಲ್ ಪ್ರಕಾರ, ಪ್ರತಿದಿನ ಸಂಜೆ ಸಮಾರಂಭದ ಸಮಯದಲ್ಲಿ ಅಟ್ಟಾರಿ-ವಾಘಾ ಗಡಿಯಲ್ಲಿ ಎರಡೂ ಪಡೆಗಳು ಗಡಿ ಗೇಟ್ಗಗೇಟ್‌ಗಳನ್ನು ತೆರೆಯುತ್ತವೆ ಮತ್ತು ಸಾಂಪ್ರದಾಯಿಕ ಹ್ಯಾಂಡ್ಶೇಕ್ ಸಹ ನಡೆಯುತ್ತದೆ. ಆದರೆ ಏಪ್ರಿಲ್ 22 ರಂದು ನಡೆದ ಮಾರಣಾಂತಿಕ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಸಮಾರಂಭವನ್ನು ಸಂಕ್ಷಿಪ್ತವಾಗಿ ನಿಲ್ಲಿಸಲಾಗಿತ್ತು.

# ಬಂಡೆಯ ನಾಡು ರಾಯಚೂರ ಜಿಲ್ಲೆಯ ಜನತೆಗೆ ಶಕ್ತಿ ಯೋಜನೆ ಬಹು ಉಪಕಾರಿ

## 'ಬಂಡೆಯ ನಾಡು' ರಾಯಚೂರ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಶಕ್ತಿ ಯೋಜನೆಯು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ರಾಯಚೂರ ವಿಭಾಗದಿಂದ ಸಮರ್ಪಕವಾಗಿ ಅನುಷ್ಠಾನವಾಗುತ್ತ, ಜನಮಾನಸದ ಯೋಜನೆಯಾಗಿ ಹೊರಹೊಮ್ಮಿದೆ.

ರಾಯಚೂರ ಜಿಲ್ಲೆಯಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ 2023ರ ಜೂನ ಮಾಹೆಯಲ್ಲಿ ಸರಾಸರಿ ಶೇ.18.42ರಷ್ಟು ಇದ್ದು, ಅದು ಇದೀಗ 2025ರ ಏಪ್ರೀಲ್ ಮಾಹೆಯಲ್ಲಿ ಶೇ.35.81ಕ್ಕೆ ತಲುಪಿದೆ. ಆದಾಯದ ಪ್ರಮಾಣವು 2023ರ ಜೂನ್ ಮಾಹೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ. ಈ ಮೊದಲು 678.67 ಕೋಟಿ ರೂ.ದಷ್ಟಿದ್ದ ಆದಾಯವು 2025ರ ಏಪ್ರೀಲ್ ಮಾಹೆಯಲ್ಲಿ 1798.81 ಕೋಟಿ ರೂ.ದಷ್ಟು ಹೆಚ್ಚಾಗಿದೆ.


ಶಕ್ತಿ ಯೋಜನೆ ಜಾರಿಯಾದಾಗಿನಿಂದ 2025ರ ಏಪ್ರೀಲ್ ಮಾಹೆವರೆಗೆ ರಾಯಚೂರ 1ನೇ ಘಟಕ, ರಾಯಚೂರ 2ನೇ ಘಟಕ, ರಾಯಚೂರ 3ನೇ ಘಟಕ, ಲಿಂಗಸೂರ ಘಟಕ, ಸಿಂಧನೂರ, ಮಾನವಿ ಘಟಕ, ದೇವದುರ್ಗ ಘಟಕ ಮತ್ತು ಮಸ್ಕಿ ಘಟಕ ಸೇರಿ 2023ರ ಜೂನ್ ಮಾಹೆಯಲ್ಲಿ 18.42 ಲಕ್ಷ, ಜುಲೈನಲ್ಲಿ 30.81 ಲಕ್ಷ, ಆಗಸ್ಟ್ ಮಾಹೆಯಲ್ಲಿ 36.06 ಲಕ್ಷ, ಸೆಪ್ಟೆಂಬರ್ ಮಾಹೆಯಲ್ಲಿ 38.18 ಲಕ್ಷ, ಅಕ್ಟೋಬರ್ ಮಾಹೆಯಲ್ಲಿ 35.47 ಲಕ್ಷ, ನವೆಂಬರ್ ಮಾಹೆಯಲ್ಲಿ 36.07 ಲಕ್ಷ, ಡಿಸೆಂಬರ್ ಮಾಹೆಯಲ್ಲಿ 38.57 ಲಕ್ಷ ಅದೇ ರೀತಿ 2024ರ ಜನವರಿ ಮಾಹೆಯಲ್ಲಿ 39.27 ಲಕ್ಷ, ಫೆಬ್ರವರಿಯಲ್ಲಿ 38.38 ಲಕ್ಷ, ಮಾರ್ಚನಲ್ಲಿ 35.87 ಲಕ್ಷ, ಏಪ್ರೀಲ್‌ನಲ್ಲಿ 32.92 ಲಕ್ಷ, ಮೇ ನಲ್ಲಿ 32.63 ಲಕ್ಷ, ಜೂನ್‌ದಲ್ಲಿ 34.24 ಲಕ್ಷ, ಮೇನಲ್ಲಿ 32.63 ಲಕ್ಷ, ಜೂನದಲ್ಲಿ 34.24 ಲಕ್ಷ, ಜುಲೈನಲ್ಲಿ 36.04 ಲಕ್ಷ, ಆಗಸ್ಟನಲ್ಲಿ 37.86 ಲಕ್ಷ, ಸೆಪ್ಟೆಂಬರ್‌ನಲ್ಲಿ 34.26 ಲಕ್ಷ, ಅಕ್ಟೋಬರನಲ್ಲಿ 34.86 ಲಕ್ಷ, ನವೆಂಬರನಲ್ಲಿ 36.70 ಲಕ್ಷ, ಡಿಸೆಂಬರ್‌ನಲ್ಲಿ 37.28 ಲಕ್ಷ, ಅದೇ ರೀತಿ 2025ರ ಜನವರಿ ಮಾಹೆಯಲ್ಲಿ 34.65 ಲಕ್ಷ, ಫೆಬ್ರವರಿಯಲ್ಲಿ 34.32 ಲಕ್ಷ, ಮಾರ್ಚನಲ್ಲಿ 32.83 ಲಕ್ಷ ಮತ್ತು ಏಪ್ರೀಲನಲ್ಲಿ 35.81 ಲಕ್ಷ ಮಹಿಳಾ ಪ್ರಯಾಣಿಕರು ಸಂಚಾರ ಮಾಡಿದ್ದಾರೆ.

ಶಕ್ತಿ ಯೋಜನೆ ಜಾರಿಯಾದಾಗಿನಿಂದ ಇಲ್ಲಿವರೆಗೆ ದಾಖಲೆ ಪ್ರಮಾಣದಲ್ಲಿ ನಿಗಮಕ್ಕೆ ಆದಾಯವು ಹರಿದುಬಂದಿದೆ. ಯೋಜನೆ ಜಾರಿಯಿಂದ ಹಿಡಿದು 2025ರ ಏಪ್ರೀಲ್ ಮಾಹೆವರೆಗೆ ರಾಯಚೂರ 1ನೇ ಘಟಕದಿಂದ 13.05 ಕೋಟಿ ರೂ., ರಾಯಚೂರ 2ನೇ ಘಟಕದಿಂದ 43.23 ಕೋಟಿ ರೂ., ರಾಯಚೂರ 3ನೇ ಘಟಕದಿಂದ 38.39 ಕೋಟಿ ರೂ., ಲಿಂಗಸೂರ ಘಟಕದಿಂದ 66.41 ಕೋಟಿ ರೂ., ಸಿಂಧನೂರ ಘಟಕದಿಂದ 50.16 ಕೋಟಿ ರೂ.. ಮಾನವಿ ಘಟಕದಿಂದ 21.77 ಕೋಟಿ ರೂ., ದೇವದುರ್ಗ ಘಟಕದಿಂದ 42.79 ಕೋಟಿ ರೂ ಮತ್ತು ಮಸ್ಕಿ ಘಟಕದಿಂದ 44.12 ಕೋಟಿ ರೂ.ನಷ್ಟು ಆದಾಯ ಬಂದಿರುವುದು ಗಮನಾರ್ಹ ಸಾಧನೆಯಾಗಿದೆ.

ಶಕ್ತಿ ಯೋಜನೆ ಜಾರಿಯಾಗಿ 2024ರ ಏಪ್ರಿಲ್ 1 ರಿಂದ 25ರ ಏಪ್ರೀಲ್ 15ರವರೆಗೆ ರಾಯಚೂರ 1ನೇ ಘಟಕದಲ್ಲಿ 4.16 ಲಕ್ಷ, ರಾಯಚೂರ 2ನೇ ಘಟಕದಲ್ಲಿ 6.04 ಲಕ್ಷ, ರಾಯಚೂರ 3ನೇ ಘಟಕದಲ್ಲಿ 4.32 ಲಕ್ಷ, ಲಿಂಗಸೂರ ಘಟಕದಲ್ಲಿ 11.35 ಲಕ್ಷ, ಸಿಂಧನೂರದಲ್ಲಿ 7.95 ಲಕ್ಷ, ಮಾನವಿಯಲ್ಲಿ 4.76 ಲಕ್ಷ, ದೇವದುರ್ಗದಲ್ಲಿ 6.85 ಲಕ್ಷ ಮತ್ತು ಮಸ್ಕಿಯಲ್ಲಿ 7.36 ಲಕ್ಷ ಪ್ರಮಾಣದಷ್ಟು ಶಕ್ತಿ ಯೋಜನೆಯ ಫಲಾನುಭವಿಗಳ ಅಂಕಿ ಸಂಖ್ಯೆ ದಾಖಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ರಾಜ್ಯ ಸರ್ಕಾರದಿಂದ 2023–24ನೇ ಸಾಲಿನಲ್ಲಿ 646.07 ಕೋಟಿ ರೂ, 2024–25ನೇ ಸಾಲಿನಲ್ಲಿ 1012.94 ಕೋಟಿ ರೂ. ಹಾಗೂ 2025–26ನೇ ಸಾಲಿನಲ್ಲಿ 84.41 ಕೋಟಿ ರೂ ಸೇರಿದಂತೆ ಜೂನ್ 2023ರಿಂದ ಇಲ್ಲಿವರೆಗೆ 1743.42 ಕೋಟಿ ರೂ.ನಷ್ಟು ಅನುದಾನ ನೀಡಲಾಗಿರುತ್ತದೆ.

ಶಕ್ತಿ ಯೋಜನೆ ಜಾರಿಯಾದ ನಂತರ ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 98 ಹೊಸದಾದ ಅನುಸೂಚಿಗಳನ್ನು ಪ್ರಾರಂಭಿಸಲಾಗಿದೆ. ಕಾರ್ಯಚರಣೆಯಲ್ಲಿದ್ದ ಅನುಸೂಚಿಗಳ ಪೈಕಿ 188 ಅನುಸೂಚಿಗಳಿಗೆ ಪರಿಷ್ಕರಣೆ ಮಾಡಿ ಒಟ್ಟು 346 ಟ್ರಿಪ್‌ಗಳನ್ನು ಹೆಚ್ಚಿಗೆ ಸೇರ್ಪಡೆಗೊಳಿಸಲಾಗಿದೆ. ಒಟ್ಟು 159 ಹೊಸ ವಾಹನಗಳು ಸೇರ್ಪಡೆಯಾಗಿರುವುದು ವಿಶೇಷ ಸಾಧನೆಯಾಗಿದೆ ಎನ್ನುತ್ತಾರೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ರಾಯಚೂರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಎಂ.ಎಸ್.ಚಂದ್ರಶೇಖರ.




'ನಿತ್ಯ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸಿ ಕೆಲಸ ಮಾಡುವವರಿಗೆ, ಮಹತ್ವದ ಕಾರ್ಯಕ್ಕಾಗಿ ಪ್ರತಿನಿತ್ಯ ಸಂಚರಿಸುವವರಿಗೆ ಹಾಗೂ ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಶಕ್ತಿ ಯೋಜನೆಯಿಂದ ಸಾಕಷ್ಟು ಅನುಕೂಲವಾಗಿದೆ. ರಾಜ್ಯ ಸರ್ಕಾರಕ್ಕೆ ನಾವು ಅನಂತ ಧನ್ಯವಾದಗಳನ್ನು ತಿಳಿಸುತ್ತೇವೆ' ಎನ್ನುತ್ತಾರೆ ರಾಯಚೂರ ಜಿಲ್ಲೆಯ ಶಕ್ತಿ ಯೋಜನೆಯ ಫಲಾನುಭವಿಗಳಾದ ರಾಯಚೂರದ ಹನುಮಂತಿ ಹಾಗೂ ದೇವಸಗೂರಿನ ಯಶೋಧ ಅವರು. ಅದೇ ರೀತಿ ಸಿಂಧನೂರ, ಮಸ್ಕಿ, ಮಾನವಿ, ಲಿಂಗಸೂರ, ದೇವದುರ್ಗ, ಹಾಗೂ ಸಿರವಾರ ತಾಲೂಕಿನಲ್ಲಿನ ಶಕ್ತಿ ಯೋಜನೆಯ ಫಲಾನುಭವಿಗಳು ಸಹ ಶಕ್ತಿ ಯೋಜನೆಯಿಂದಾಗಿ ನಮಗೆ ಸಾಕಷ್ಟು ಅನುಕೂಲವಾಗಿದೆ ಎಂದು ಅಭಿಪ್ರಾಯಪಡುವುದು ಈ ಯೋಜನೆಯ ಜನಪ್ರಿಯೆತೆಗೆ ಸಾಕ್ಷಿಯಾಗಿದೆ.

# ಇಂದು ರಾಷ್ಟ್ರ ರಕ್ಷಣೆಗಾಗಿ ನಾಗರಿಕರ ಸಮಿತಿ ವತಿಯಿಂದ ತಿರಂಗಯಾತ್ರೆ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಮೇ.21–** ಪಟ್ಟಣದ ಪತ್ರಿಕಾ ಭವನದಲ್ಲಿ ರಾಷ್ಟ್ರ ರಕ್ಷಣೆಗಾಗಿ ನಾಗರಿಕರ ಸಮಿತಿ ತಾ.ಸಂಚಾಲಕರಾದ ರೇವಣಸಿದ್ದಯ್ಯ ಹಿರೇಮಠ ಮಾತನಾಡಿ ಭಾರತ ಮಾತೆಯ ಸಿಂದೂರವಾಗಿರುವ ಜಮ್ಮು ಮತ್ತು ಕಾಶ್ಮೀರವನ್ನು ಮತ್ತೊಮ್ಮೆ ಅಖಂಡವಾಗಿ ಕಣ್ತುಂಬಿಕೊಳ್ಳುವ ದಿನಗಳು ನಮ್ಮ ಮುಂದಿವೇ ನಮ್ಮ ಭಾರತೀಯ ಸೇನೆಗೆ ಇನ್ನಷ್ಟು ಶಕ್ತಿ,ಧೈರ್ಯ,ಬೆಂಬಲವನ್ನು ನೀಡುವ ಸಲುವಾಗಿ ಹಾಗೂ ನಮ್ಮಲ್ಲಿರುವ ದೇಶಭಕ್ತಿಯನ್ನು ಪ್ರಕಟಿಸುವ ಸಮಯ ಬಂದಿರುವುದರಿಂದ ರಾಷ್ಟ್ರ ರಕ್ಷಣೆಗಾಗಿ ನಾಗರಿಕರ ಸಮಿತಿ ವತಿಯಿಂದ ಮೇ.21 ರಂದು ಮಾನ್ವಿ ಪಟ್ಟಣದಲ್ಲಿ ಭಾರತೀಯ ಸೈನಿಕರು ಆಪರೇಷನ್ ಸಿಂಧೂರವನ್ನು ಯಶಸ್ವಿಯಾಗಿಸಿದರ ಅಂಗವಾಗಿ ತಿರಂಗ ಯಾತ್ರೆಯನ್ನು ನಡೆಸುವ ಮೂಲಕ ಭಾರತೀಯ ಯೋಧರಿಗೆ ಅಭಿನಂದನೇ ಸಲ್ಲಿಸಲಾಗುವುದು. ಪಟ್ಟಣದ ರಾಯಚೂರು ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಬಸವ ವೃತ್ತ,ಸಿಂಧನೂರು ರಸ್ತೆಯಲ್ಲಿನ ವಾಲ್ಮೀಕಿ ವೃತ್ತದ ವರೆಗೂ ತಿರಂಗಯಾತ್ರೆ ನಡೆಯಲಿದೆ . ತಿರಂಗ ಯಾತ್ರೆಯಲ್ಲಿ ತಾಲೂಕಿನ ಸರ್ವ ಧರ್ಮದ ಧರ್ಮಗುರುಗಳು, ಪಟ್ಟಣದ ವಿವಿಧ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳು,



ಮಾಜಿಸೈನಿಕರು, ಸಂಘ ಸಂಸ್ಥೆಗಳವರು, ವೈದ್ಯರು, ವಕೀಲರು,ವ್ಯಾಪಾರಸ್ಥರು ಸೇರಿದಂತೆ ಗಣ್ಯರು, ಪ್ರಮುಖರು,ಜನಪ್ರತಿನಿಧಿಗಳು ಅಧಿಕಾರಿಗಳು, ಪಕ್ಷ,ಜಾತಿ,ಧರ್ಮ ಭೇದವಿಲ್ಲದೆ ನಾವೆಲ್ಲರು ಒಂದೆ ನಾವೆಲ್ಲರು ಭಾರತೀಯರು ಎನ್ನುವ ಭಾವನೆಯಿಂದ ಭಾಗವಹಿಸಲಿದ್ದಾರೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ತಮ್ಮ ಮನೆಗಳಿಂದ ತ್ರಿವರ್ಣ ಧ್ವಜಗಳನ್ನು ಹಿಡಿದು ವಿಜಯ ಯಾತ್ರೆಯಾದ ತಿರಂಗಯಾತ್ರೆಯಲ್ಲಿ ಭಾಗವಹಿಸೋಣ ಎಂದು ತಿಳಿಸಿದರು. ತಾ.ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹಾರಪಾಟೀಲ್,ಕರವೇ ತಾ.ಘಟಕದ ಅಧ್ಯಕ್ಷರಾದ ಡಿ.ಬಸವನಗೌಡ, ತಿಪ್ಪಣ್ಣ ಹೊಸಮನಿ, ಡಿ.ಜಿ. ಕರ್ಕಿಹಳ್ಳಿ, ಮನೋಜ ಜೈನ್, ಗೋಪಾಲ ಇಭ್ರಮಪುರ್, ಎಂ.ಡಿ. ಮುಜೀಬ್ ಮಾಜಿ ಸೈನಿಕರಾದ ಶಿವಯ್ಯಸ್ವಾಮಿ, ಚೆನ್ನರೆಡ್ಡಿ,ಸೇರಿದಂತೆ ಇನ್ನಿತರರು ಇದ್ದರು.

# ಶಾಸಕ ಕೊತ್ತೂರು ಮಂಜುನಾಥ್ ವಿರುದ್ಧ ಎಫ್‌ಐಆರ್

**ಬೆಂಗಳೂರು, ಮೇ 21–** ದೇಶದ ಸೇನಾ ಕಾರ್ಯಚರಣೆ ಬಗ್ಗೆ ಕುಹುಕವಾಡಿದ್ದ ಶಾಸಕ ಕೊತ್ತೂರು ಮಂಜುನಾಥ್ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಗಳೂರು ನಾಗರಿಕ ಹಕ್ಕು ಹೋರಾಟ ಸಮಿತಿ ಉಪಾಧ್ಯಕ್ಷ ಗಣೇಶ್ ಸಿಂಗ್ ಅವರು ನೀಡಿರುವ ದೂರಿನ ಆಧಾರದ ಮೇಲೆ ಮಂಜುನಾಥ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಾಶ್ಮಿ?ರದ ಪಹಲ್ಗಾಮ್ ನಲ್ಲಿ 26 ಮಂದಿ ಮಂದಿಯನ್ನು ಅವರ ಕುಟುಂಬದವರ ಸಮ್ಮುಖದಲ್ಲೇ ಹತ್ಯೆ ಮಾಡಿದ್ದ ಪಾಕಿಸ್ತಾನ ಉಗ್ರರಿಗೆ ಸಂಬಂಧಿಸಿದಂತೆ ಭಾರತವು ಆಪರೇಷನ್ ಸಿಂಧೂರ ಹೆಸರಿನಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ 9ಉಗ್ರ ನೆಲೆಗಳನ್ನು ಮತ್ತು ಎಂಟು ವಾಯು ನೆಲೆಗಳನ್ನು ನಾಶ ಮಾಡಿತ್ತು.

ಮಾತ್ರವಲ್ಲ, ಪಾಕಿಸ್ತಾನಕ್ಕೆ ಸೇರಿದ ಎಫ್– 16 ಯುದ್ಧ ವಿಮಾನ ಹಾಗೂ ಚೀನಾ ದೇಶದ ಕ್ಷಿಪಣಿಗಳನ್ನು ಮತ್ತು ಡ್ರೋನ್ ಗಳನ್ನು ನಾಶ ಮಾಡಿದ ಭಾರತೀಯ ಸೇನೆಯ ಪರಾಕ್ರಮಕ್ಕೆ ಇಡೀ ವಿಶ್ವದಾದ್ಯಂತ ಪ್ರಶಂಸೆ ವ್ಯಕ್ತಪಡಿಸಿತ್ತು.

ಇಂತಹ ಸನ್ನಿವೇಶದಲ್ಲಿ ಕೋಲಾರ ವಿಧಾನಸಭಾ ಕ್ಷೇತ್ರದ ಶಾಸಕ ಕೊತ್ತೂರು ಮಂಜುನಾಥ್ ಅವರು ಕೆಲ ದಿನಗಳ ಹಿಂದೆ ಮಾಧ್ಯಮಗಳೊಂದಿಗೆ ಮಾತನಾಡುತ್ತಾ ಭಾರತೀಯ ಸೇನೆ ನಾಲ್ಕು ವಿಮಾನಗಳನ್ನು ಅತ್ತಿಂದ ಇತ್ತ ಇತ್ತಿಂದ ಅತ್ತ ಹಾರಾಡಿಸಿ ಬಡಾಯಿಕೊಚ್ಚಿಕೊಳ್ಳುತ್ತಿದೆ ಎಂದು ಲಘುವಾಗಿ ಮಾತನಾಡಿದ್ದರು.

ಪಾಕಿಸ್ತಾನದ ಮೇಲೆ ಭಾರತೀಯ ಸೇನೆ ನಡೆಸಿರುವ ದಾಳಿಗೆ ಸಾಕ್ಷ್ಯಗಳೇನು ? ಎಂಬ ಹೇಳಿಕೆ ನೀಡುವ ಮೂಲಕ ಭಾರತ



ದೇಶಕ್ಕೆ ಮತ್ತು ಭಾರತೀಯ ಸೇನೆಗೆ ಕಳಂಕ ಹಚ್ಚುವ ಮಾತುಗಳನ್ನಾಡಿ ದೇಶದ್ರೊಹದ ಕಾರ್ಯವನ್ನು ಎಸಗಿರುತ್ತಾರೆ.

ತಮ್ಮ ದೇಶದ್ರೊಹದ ಮಾತುಗಳ ಮೂಲಕ 140 ಕೋಟಿ ಭಾರತೀಯರ ಭಾವನೆಗಳಿಗೆ ದಕ್ಕೆ ತಂದಿರುವ ಹಾಗೂ ಬಹಿರಂಗವಾಗಿ ಭಾರತ ದೇಶ ಮತ್ತು ಭಾರತೀಯ ಸೇನೆಗೆ ಅವಮಾನಕರ ಮಾತುಗಳನ್ನಾಡಿ ದೇಶದ್ರೊಹದ ಕಾರ್ಯವನ್ನೆಸಗಿರುವ ಶಾಸಕ ಕೊತ್ತೂರು ಮಂಜುನಾಥ್ರವರ ವಿರುದ್ಧ ಕೂಡಲೇ ದೇಶದ್ರೊಹದ ಪ್ರಕರಣ ಮತ್ತು ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವ ಸಂಬಂಧ ಕಾನೂನು ರೀತ್ಯಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ದಾಖಲೆಗಳ ಸಹಿತ ಬನಶಂಕರಿ ಪೋಲೀಸ್ ಠಾಣೆಯುಲ್ಲಿ ಗಣೇಶ್ ಸಿಂಗ್ ದೂರು ದಾಖಲಿಸಿದ್ದರು.

ಇವರ ನೀಡಿರುವ ದೂರಿನ ಆಧಾರದ ಮೇಲೆ ಮಂಜುನಾಥ್ ಅವರ ವಿರುದ್ಧ ಬನಶಂಕರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ.

## 200 ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ಡಿಜಿ, ಐಜಿಪಿ ಪ್ರಶಂಸನಾ ಸೇವಾ ಪದಕ




**ಬೆಂಗಳೂರು,ಮೇ 21–**ಉತ್ತಮ ಕಾರ್ಯದಕ್ಷತೆ ತೋರಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಹೆಸರಿನಲ್ಲಿ ಇದೇ ಮೊದಲ ಬಾರಿಗೆ ನೀಡಲಾಗುತ್ತಿರುವ ಪ್ರಶಂಸನಾ ಸೇವಾ ಪದಕಕ್ಕೆ 200 ಮಂದಿ ಅಧಿಕಾರಿ ಹಾಗೂ ಸಿಬ್ಬಂದಿ ಆಯ್ಕೆಯಾಗಿದ್ದಾರೆ.

ಐಪಿಎಸ್ ಅಧಿಕಾರಿಗಳಾದ ಶ್ರಿಜೇಶ್,ಡಾ.ಸುಬ್ರಹೆ?ಶ್ವರ ರಾವ್, ಲಾಬುರಾಮ್, ಸಂದೀಪ್ ಪಾಟೀಲ್, ರಮಣ್ ಗುಪ್ತಾ,ಡಾ. ಚಂದ್ರಗುಪ್ತ,ಚೇತನ್ ಸಿಂಗ್ ರಾಥೋಡ್, ಡಾ.ಎಂ.ಬಿ .ಬೋರಲಿಂಗಯ್ಯ, ಎಸ್.ಡಿ.ಶರಣಪ್ಪ, ಎಂ.ಎನ್.ಅನುಚೇತ್, ಬಿ.ರಮೇಶ್, ಸಂತೋಷ್ ಬಾಬು, ಎಸ್.ಗಿರೀಶ್, ಡಾ.ಸಂಜೀವ್ ಎಂ.ಪಾಟೀಲ್,ಜಿ.ಶಿವ ವಿಕ್ರಂ,ಹೆಚ್.ಶೇಖರ್,ಲೋಕೇಶ್ ಬಿ.ಜಗಲಸಾರ,ಡಾ.ಸೌಮ್ಯಲತಾ ಹಾಗೂ ಕೆ.ವಿ ಅಶೋಕ್ ಅವರು ಪದಕಕ್ಕೆ ಭಾಜನರಾಗಿದ್ದಾರೆ. ಬಿ.ಎನ್. ನರಸಿಂಹಮೂರ್ತಿ (ಎಪಿಆರ್ಒ–ಡಿಜಿ ಕಚೇರಿ), ಕೆ.ಬಿ.ಗೌಡ, ಲಕ್ಷ್ಮಣ ಎಸ್.ಕೆ. ಮನೋಹರ್ ಕೆ.ಆರ್,ವೈಎಸ್ ಹುಕ್ಲಿ, .ರವಿಪ್ರಕಾಶ್,ಹೆಚ್. ಕೆ.ಕುಮಾರಸ್ವಾಮಿ, ಎಸ್.ಪಿ.ಶ್ರಿನಿವಾಸ,ಶ್ರಿನಿವಾಸ ಕುಲಕರ್ಣಿ, ಕೆ.ಎಸ್.ಶಿವಸ್ವಾಮಿ, ಶ್ರಿನಿವಾಸ ರಾವ್ ಎನ್,ವೆಂಕಟಚಲಪತಿ ಎಂ,ಲೋಕೇಶ್ ಹೆಚ್.ಡಿ,ಭರತ್‌ಕುಮಾರ್ ಎಸ್ ಹಾಗೂ ಎಸ್.ಸೋಮಶೇಖರ್ ರವರು ಐಜಿಪಿ ಪ್ರಶಂಸನಾ ಪದಕ ಪಡೆಯಲಿದ್ದಾರೆ. ಡಿಜಿಪಿ ಅಲೋಕ್ ಮೋಹನ್ ಅವರು ನಾಳೆ ನಿವೃತ್ತಿಯಾಗಲಿದ್ದು, ಅಂದು ನಡೆಯುವ ಬೀಳ್ಕೊಡುಗೆ ಪರೇಡ್ ನಲ್ಲಿ ಪದಕ ಪ್ರದಾನ ನಡೆಯಲಿದೆ.

# ಡಯಟ್: ವಿವಿಧ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಮೇ.21–**ಇಲ್ಲಿನ ಯರಮರಸ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ 2025–26ನೇ ಸಾಲಿನ ಡಿ.ಇಎಲ್.ಇಡಿ ಹಾಗೂ ಡಿ.ಪಿ.ಇಡಿ ಕೋರ್ಸುಗಳಿಗೆ ಸರ್ಕಾರಿ ಕೋಟಾದ ಸೀಟುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಿ.ಇಎಲ್.ಇಡಿ. ಕೋರ್ಸಿನ ವಿವಿಧ ಮಾಧ್ಯಮಗಳು ಹಾಗೂ ಡಿ.ಪಿ.ಇಡಿ ಕೋರ್ಸಿನ ಪ್ರಥಮ ವರ್ಷದ ವ್ಯಾಸಂಗಕ್ಕಾಗಿ ಪ್ರವೇಶ ಬಯಸುವ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ ವಿಳಾಸ: www.schooleducation.kar.nic.in ಅಂತರ್ಜಾಲದ ಮುಖಪುಟದಲ್ಲಿ ಪ್ರಕಟವಾಗುವ Application for Admission to D.el.Ed/Dped Course–2025–26 ಎಂಬುದನ್ನು ಕ್ಲೀಕ್ ಮಾಡಿದ ನಂತರ ಮೇಲೆ ಪ್ರಕಟವಾಗುವ ಅರ್ಜಿಯನ್ನು ಮುದ್ರಣ ಮಾಡಿ ಅರ್ಜಿ ಭರ್ತಿಮಾಡಿ ಹಾಗೂ ಬ್ಯಾಂಕ್ ಡಿ.ಡಿಯೊಂದಿಗೆ ಡಯಟ್ ಯರಮರಸ್ ಕಚೇರಿಗೆ ಜೂನ್ 05ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ ಸಿಂಧನೂರನಲ್ಲಿ ಕಲಿಕಾ ಸೌಲಭ್ಯಗಳಿರುತ್ತವೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರಿನ ಯರಮರಸ್ ಶಾಲಾ ಶಿಕ್ಷಣ ಇಲಾಖೆಯ (ಡಯಟ್) ಉಪನಿರ್ದೇಶಕರು (ಅಭಿವೃದ್ಧಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು ಮೇ.21–** ಇಲ್ಲಿನ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಹೊಸದಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶ ಬಯಸುವ ಪಿ.ಯು.ಸಿ, ಐ.ಟಿ.ಐ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲು ಪ್ರವರ್ಗ–1, 2ಎ, 2ಬಿ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ ವಿಳಾಸ: https:shp.karnataka.gor.in/bcwd ನಲ್ಲಿ ಜೂನ್ 20ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರವರ್ಗ–1, ಎಸ್.ಸಿ & ಎಸ್.ಟಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯವು 2.5 ಲಕ್ಷ ರೂ. ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯವು 1 ಲಕ್ಷ ರೂಪಾಯಿಗಳ ಒಳಗಿರಬೇಕು.

ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ ವಿಳಾಸ: https:shp.karnataka.gor.in/bcwd ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ ಅಥವಾ ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004, 8050770005ಗೆ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪರಾಧ ತಡೆಗೆ ಕಠಿಣ ಕ್ರಮ ಜರುಗಿಸಿ:ಸಚಿವ ಈಶ್ವರ ಖಂಡ್ರೆ

**ಬೀದರ ,ಮೇ.21–** ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ಮೂಲಕ ಪೊಲೀಸ್ ಇಲಾಖೆ ಕಾನೂನು ಸುವ್ಯವಸ್ಥೆ ಕಾಪಾಡಲು ಮುಂದಾಗಬೇಕು. ಅಪರಾಧ ತಡೆಗೆ ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯಲ್ಲಿ ಸಹಕಾರ ನೀಡಲಾಗುವುದು ಎಂದು ಅರಣ್ಯ ಪರಿಸರ ಹಾಗೂ ಜೈವಿಕ ಮತ್ತು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ಇಂದು ಎಸ್ಪಿ ಕಚೇರಿ ಆವರಣದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ 1.25 ಕೋಟಿ ರೂ. ಅನುಧಾನದಲ್ಲಿ ಖರೀದಿಸಲಾದ 7 ಬುಲೆರೋ ಹಾಗೂ 2 ಸ್ಕಾರ್ಪಿಯೋ ವಾಹನಗಳನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿ ಮಾತನಾಡಿದರು. ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದಾರೆ ಮಾತ್ರ ಜನರು ನೆಮ್ಮದಿಯ ನಿದ್ದೆ ಮಾಡಲು ಸಾಧ್ಯ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಇತ್ತೀಚಿಗೆ ಕೆಕೆಆರ್ ಡಿಬಿ ಅನುಧಾನದಲ್ಲಿ ಎಐ ಕ್ಯಾಮೆರಾ ಒಳಗೊಂಡ ಕಮಾಂಡ್ ಸೆಂಟರ್ ಸ್ಥಾಪನೆ ಮಾಡಲಾಗಿದೆ ಮುಂದೆಯೂ ಕಾನೂನು ಸುವ್ಯವಸ್ಥೆಗೆ ಎಲ್ಲಾ ರೀತಿಯಲ್ಲಿ ಕ್ರಮವಹಿಸಲಾಗುವುದು ಎಂದರು.ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಖಾತೆ ಸಚಿವ ರಹೀಂ ಖಾನ್, ನಗರಸಭೆ ಅಧ್ಯಕ್ಷ ಮೊಹ್ಮದ್ ಗೌಸ್, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**